ESTD: 1919 ಸ್ಥಾಪನೆ

Registered No. M. 4468

ಚಂದಾ ದರ
ಸ್ಥಳೀಯರಿಗೆ
4—8—0
ಪರಸ್ಥಳೀಯರಿಗೆ
6—2—0
ಬಿಡಿ ಸಂಚಿಕೆ:
ಮಂಗಳವಾರ 0—1—6
ಶುಕ್ರವಾರ 0—0—6
ಕಾರ್ಯಾಲಯ
ರಥಬೀದಿ, ಮಂಗಳೂರು

ಕಂಠೀರವ

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಜೂನ್ ತಾ. ೪ನೇ ಮಂಗಳವಾರ [ಸಂಚಿಕೆ ೧೯

VOL·XXVIII] MANGALORE. TUESDAY 4. JUNE, 1946 [NO. 19

Work Executed by Skilled Artists

Oil Paintings
Commercial Drawings
Cinema Slides
Etc. Etc.

Shevgoor Fine Arts
CAR ST. MANGALORE.

ಸಿಮ್ಲಾ ಸಮ್ಮೇಳನದ ಅಪಜಯಕ್ಕೆ ಜವಾಬುದಾರಿ ಯಾರದು???

ಸಿಮ್ಲದ ಮಾತುಕಥೆಗಳು ವ್ಯರ್ಥವಾಗಲು ಯಾರು ಹೊಣೆ, ಯಾರು ಕಾರಣರು? ಕಾಂಗ್ರೆಸ್ ಎಂದು ಎಂ. ಜಿನ್ನರು ಹೇಳುತ್ತಾರೆ. ಆದರೆ ಇದರ ಸಮಂಜಸವಾದ ಉತ್ತರವು, ಆ ಸಂಬಂಧವಾಗಿ ಪ್ರಕಟವಾದ ಯಾವತ್ತು ಕಾಗದಪತ್ರಗಳಲ್ಲಿ ಕಂಡು ಬರುತ್ತದೆ. ಕಾಂಗ್ರೆಸಿಗೂ ಲೀಗಿಗೂ ಪ್ರಾಮುಖ್ಯ ಎಷಯಗಳಲ್ಲಿ ಪ್ರತ್ಯಕ್ಷವಾಗಿ ಆಕಾಶ ಪಾತಾಳಗಳಷ್ಟೂ ವ್ಯತ್ಯಾಸವಿತ್ತೆಂಬುದು ಸಂಪೂರ್ಣವಾಗಿ ಎಲ್ಲರಿಗೂ ತಿಳಿದದ್ದೇ. ಹಾಗೆ ಹಿಂದುಸ್ಥಾನದ ಸ್ವಾತಂತ್ರ್ಯವನ್ನು ಕೂಡಲೇ ಪ್ರಕಟಿಸುವುದು ಕಾಂಗ್ರೆಸಿಗೆ ಬೇಕಾಗಿತ್ತು; ಇದರ ನಿದರ್ಶನವಾಗಿ ಹಿಂದುಸ್ಥಾನದಿಂದ ಬ್ರಿಟಿಶ್ ಸೈನ್ಯವನ್ನು ಹಿಂದೆಗೆಯಬೇಕೆಂದು ಕಾಂಗ್ರೆಸ್ ಕೇಳಿತ್ತು. ಎಂ ಜಿನ್ನರು ಅಂಥ ಕೇಳಿಕೆಗಳನ್ನೇನೂ ಮಂಡಿಸಿದುದಿಲ್ಲ; ಅವರ ಒಂದೇ ಒಂದು ಮುಖ್ಯೋದ್ದೇಶವು ಹಿಂದುಸ್ಥಾನವನ್ನು ಪಾಳು ಮಾಡಿಸುವುದು. ಬ್ರಿಟಿಶ್ ಸೇನೆಗಳು ಭಾರತದಿಂದ ಹಿಂದೆಗೆಯಲಿ ಅಥವಾ ಬಿಡಲಿ—ಅದರ ಗೊಡವೆ ಏನೂ ಅವರಿಗೆ ತಿಲಾಂಶವೂ ಇಲ್ಲ. ಅಷ್ಟೇ ಅಲ್ಲ; ಪಾಕಿಸ್ತಾನವಾಗಲೀ ಹಿಂದುಸ್ಥಾನವಾಗಲೀ—ಅದು ಬ್ರಿಟಿಶರ ಆಡಳಿತದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದಿ ಸ್ವತಂತ್ರವಾಗುವುದು ಕೂಡ ಅವರ ಯೋಚನೆಗೇ ಒಳಗಾಗಿಲ್ಲ. ಆದ್ದರಿಂದ ಈ ಎವಾದವೆಂಬುದು ನಿಜವಾಗಿ ಒಂದು ಕಡೆ ಸರಕಾರ, ಮತ್ತೊಂದು ಕಡೆ ಸ್ವಾತಂತ್ರ್ಯದ ಚಳವಳಿಯ ಪ್ರತಿನಿಧ್ಯ ವಹಿಸಿರುವ ಕಾಂಗ್ರೆಸ್,—ಇವೆರಡರೊಳಗೆ. ಎಂ. ಜಿನ್ನರು ಕಾಂಗ್ರೆಸಿನ ಉದ್ದೇಶವನ್ನು ಸೋಲಿಸಿ ಬಿಡುವ ಈ ಒಂದು ಗುರಿಯೊಡನೆ ಹೊರತು,ಬೇರೆ ಯಾವ ಬಣ್ಣದಲ್ಲಿಯೂ ಈ ಚಿತ್ರದಲ್ಲಿ ಎಲ್ಲಿಯೂ ಇರುವಂತೆ ತೋರುವುದಿಲ್ಲ. ಪತ್ರವ್ಯವಹಾರಗಳು ಈ ಎದ್ದ ಮಾನವನ್ನು ಸ್ಪಷ್ಟವಾದ ನಿದರ್ಶನಗಳಿಂದ ರುಜುಪಡಿಸುತ್ತಿವೆ.

ಆ ಕಾಗದಪತ್ರಗಳು ಇನ್ನೊಂದು ಸಂಗತಿಯನ್ನೂ ಸಂಪೂರ್ಣವಾಗಿ ಸ್ಪಷ್ಟ ಮಾಡಿವೆ. ಅದು ಲೀಗಿನ ನಾಯಕರ ಅಕಾರಣ ವಾದವನ್ನು ಬಯಲಿಗೆಳೆದಿದೆ. ಕಾಂಗ್ರೆಸ್ ಲೀಗಿನೊಳಗಿನ ಎವಾದವನ್ನು ಇತ್ಯರ್ಥಿಸಲು ಒಬ್ಬ ಮಧ್ಯಸ್ತನನ್ನು ನೇಮಿಸುವ ಕಾಂಗ್ರೆಸಿನ ಸೂಚನೆಯನ್ನು ಕೂಡ ಲೀಗಿನ ನಾಯಕರೊಪ್ಪಲಿಲ್ಲ; ಹಲವು ದಿನಗಳ ವರೆಗೆ ಮೂರು ಪಾರ್ಟಿಗಳವರೂ ಸಿಮ್ಲಾ ಕಾನ್ಫರೆನ್ಸಿನಲ್ಲಿ ಎಷಯಗಳನ್ನು ಚರ್ಚಿಸಿ ಚರ್ಚಿಸಿ ಸಾಕಾಗಿ ಕೊನೆಗೆ ಅದು ಯಶಸ್ವಿಯಾಗಲಿಲ್ಲವೆಂದೇ ಪ್ರಕಟವಾಗುವ ಮುಹೂರ್ತ ಒದಗಿತ್ತು. ಆ ಸಂದರ್ಭದಲ್ಲಿ ಅದು ಯಶಸ್ವಿಯಾಗಲಿಲ್ಲವೆಂಬ ಈ ಕೆಟ್ಟ ಹೆಸರು ಕೇಳುವುದನ್ನು ತಪ್ಪಿಸಲಿಕ್ಕಾಗಿ ಪಂಡಿತ ನೆಹರು ಅವರು, ಕಾಂಗ್ರೆಸ್ ಲೀಗುಗಳ ಭಿನ್ನಾಭಿಪ್ರಾಯಗಳ ತೀರ್ಮಾನಕ್ಕೆಂದು ಒಂದು ಕೊನೆಯ ಯತ್ನ ಮಾಡಿದರು. ಅವರು ಎಂ. ಜಿನ್ನರನ್ನು ಕಂಡು ಚರ್ಚಿಸಿದರು ಕಾಂಗ್ರೆಸ್ ಲೀಗುಗಳ ಎಲ್ಲ ಪ್ರಾಮುಖ್ಯ ಭಿನ್ನಾಭಿಪ್ರಾಯಗಳ ತೀರ್ಮಾನಕ್ಕಾಗಿ ಒಬ್ಬ ಮಧ್ಯಸ್ತನನ್ನು ನೇಮಿಸುವ ಎಂದು ಸೂಚಿಸಿದರು. ಆದರೆ ಇದಕ್ಕೆ ಎಂ. ಜಿನ್ನರೊಪ್ಪಿದರೆ? ಅವರು ಒಪ್ಪಿದರೆಂದು ಪಂಡಿತರು ತಿಳಿದುಕೊಂಡದ್ದು ಮಾತ್ರ. ಬ್ರಿಟಿಶನಾಗಲೀ, ಹಿಂದೂ, ಸಿಖ್, ಮುಸಲ್ಮಾನನಾಗಲೀ ಇದರಲ್ಲಿ ಮಧ್ಯಸ್ತರಾಗುವ ಹಾಗಿರಲಿಲ್ಲ; ಕಾಂಗ್ರೆಸಿನವರೂ ಲೀಗಿನವರೂ ಮಧ್ಯಸ್ತನಾಗುವ ಅರ್ಹತೆಯುಳ್ಳವರ ಒಂದೊಂದು ಪಟ್ಟಿಯನ್ನು ಅವರವರು ತಯಾರಿಸಬೇಕಿತ್ತು; ಕೊನೆಗೆ ಆ ಪಟ್ಟಿಗಳಿಂದ ಕಾಂಗ್ರೆಸಿನ ಮತ್ತು ಲೀಗಿನ ಪ್ರತಿನಿಧಿಗಳು ತಮಗೆ ಯುಕ್ತ ಕಂಡವರನ್ನು ಸಂಪೂರ್ಣ ಒಮ್ಮತದಿಂದ ಆರಿಸಬೇಕಿತ್ತು. ಹೀಗೆ ಈ ಎದ್ಯಮಾನದಿಂದ ನಿರಾಶೆಯ ಬದಲು ಆಗ ಆಶೆಯೊಂದು ಅಂಕುರಿಸಿತು. ಇದರ ಪರಿಣಾಮವಾಗಿ ಸಮ್ಮೇಳನ ಮುಂದರಿಸಿತು; ಕಾಂಗ್ರೆಸೂ ಲೀಗೂ ಒಬ್ಬ ಮಧ್ಯಸ್ತನನ್ನಾರಿಸುವ ಈ ಒಂದು ಅಂಶದ ಮಟ್ಟಿಗಾದರೂ ಒಮ್ಮತಕ್ಕೆ ಬಂತೆಂಬ ಸುವಾರ್ತೆಯನ್ನು ಕೇಳಿವೆಯೆಂದು ಪ್ರತಿಯೊಬ್ಬರೂ ನಿರೀಕ್ಷಿಸಿಕೊಂಡೇ ಇದ್ದರು. ಈ ಮಧ್ಯಸ್ತರ ಕುರಿತಾದ ತೀರ್ಮಾನವು ಏನೇ ಆಗಲಿ—ಅಂತೂ ಅದು ಕೊನೆಯದೂ ಎರಡು ಕಡೆಯವರಿಗೂ ಅನ್ವಯಿಸುವುದೂ ಆಗಿತ್ತು. ಅಂತೆ ಪಂಡಿತ ನೆಹರೂ ಅವರು ಬಾಯಿ ಮೂಲಕವಾದ ಒಪ್ಪಂದ ಬರಹ ಮೂಲಕವಾಗಿ ಆಗಲೆಂದು ಎಂ. ಜಿನ್ನರಿಗೆ ಬರೆದರು. ಆದರೆ "ನಿಮಗೂ ನನಗೂ ಯಾವ ಎಷಯದಲ್ಲಿಯೂ ಒಪ್ಪಂದವಾಗಿದ್ದಿಲ್ಲ; ನೀವು ನಿಮ್ಮ ಸಹೋದ್ಯೋಗಿಗಳ ಆಲೋಚನೆ ಕೇಳುವೆನೆಂದು ಒಪ್ಪಿದಿರಿ; ಹಾಗೇ ನಾನೂ ಮಾಡುವೆನೆಂದು ಒಪ್ಪಿದೆ. ನಮ್ಮೊಳಗೆ ನಡೆದುದೆಂದರೆ ಅಷ್ಟೇ" ಎಂದು ಪಂಡಿತರಿಗೆ ಎಂ. ಜಿನ್ನರು ಉತ್ತರ ಕೊಟ್ಟಾಗ ಪಂಡಿತರು ತಮ್ಮ ಜೀವ ಕಾಲದಲ್ಲಿ ಎಂದೂ ಇಲ್ಲದ ರೀತಿಯಲ್ಲಿ ನಡುಗಿ ಹೋಗಿರಬೇಕು. ಎಸ್ಯದಿಂದ ಬೆಪ್ಪುಕಟ್ಟಿ ಹೋಗಿರಬೇಕು. ಕೊನೆಗೆ ಎಂ. ಜಿನ್ನರು ಪಂಡಿತರಿಗೆ ನಮ್ಮ ಲೀಗಿಗೆ ಈ "ಮಧ್ಯಸ್ತರ ಸೂಚನೆ ಪಥ್ಯವಾಗಿಲ್ಲ"ವೆಂದೇ ತಿಳಿಸಿ ನಿರಾಕರಿಸಿ ಬಿಟ್ಟರು.

ಸಿಮ್ಲಾ ಸಮ್ಮೇಳನ ವ್ಯರ್ಥವಾದ ಆ ಜವಾಬುದಾರಿಯನ್ನು, ಈ ಪಂಗಡ ಅಥವಾ ಆ ಪಂಗಡದ ಮೇಲೆ ಹೊರಿಸಲಿಕ್ಕಾಗಿ ಕಾಂಗ್ರೆಸ್ ಲೀಗುಗಳೊಳಗಿನ ಎವಾದದ ಪ್ರತಿಯೊಂದು ಅಂಶವನ್ನೂ ಸೂಕ್ಷ್ಮತೆ ಎಮರ್ಶೆಗೆ ನಾವು ಒಳಪಡಿಸಬೇಕಾದ ಅಗತ್ಯವಿಲ್ಲ. ಎಂ. ಜಿನ್ನರು ತಮ್ಮ ಸ್ವಂತದ ತೀರ್ಮಾನವೊಂದನ್ನು ಅಲ್ಲದೆ, ಬೇರೆ ಯಾರ ತೀರ್ಮಾನವನ್ನೂ ಒಪ್ಪಲೂ ನಂಬಲೂ ಸಿದ್ಧರಿರಲಿಲ್ಲ. ಎಷ್ಟೇ ಯೋಗ್ಯರಾದರೂ ಸಂಪೂರ್ಣ ಹೊರಗಿನವರೊಬ್ಬರ ತೀರ್ಮಾನವನ್ನು ಕೂಡ ಅವರು ವಿಶ್ವಾಸದಿಂದ ಮನ್ನಿಸುವ ಹಾಗಿರಲಿಲ್ಲ. ಒಂದು ವೇಳೆ ಲೀಗಿಗೆ ಸಂಪೂರ್ಣವಾಗಿ ಒಲಿದವರು ಎನಾ ಅಂಥ ಕುರುಡರು ಎನಾ ಬೇರೆ ಯಾರೂ ತಮ್ಮ ಹೇಳಿಕೆಯಲ್ಲಿ ಹುರುಳನ್ನೂ ತಿರುಳನ್ನೂ ಕಾಣಲಾರರೆಂಬುದು ಎಂ. ಜಿನ್ನರಿಗೆ ಮೊದಲೇ ಚೆನ್ನಾಗಿ ತಿಳಿದಿರಬಹುದೇ? ಅವರ ಇಂಡಿಯದ ಪಾಲು ಪಟ್ಟಿಯ ಅಥವಾ ಪಾಕಿಸ್ತಾನದ ಹೇಳಿಕೆಯು ಯಾವ ನೀತಿಗೂ ಜರೂರುಯಾತಿಗೂ ಒಪ್ಪುವಂಥದಲ್ಲವೆಂದು ನಿಯೋಗ ಗೋಷ್ಠಿಯವರೇ ಸ್ಪಷ್ಟವಾಗಿ ಹೇಳಬೇಕಾದ ಸಂದರ್ಭವುಂಟಾಗಿತ್ತು. ಆದರೆ ಆಶ್ಚರ್ಯ ವೇನೆಂದರೆ—ಅದೇ ನಿಯೋಗ ಗೋಷ್ಠಿಯವರೇ, ಅದೇ ಉಸಿರಿನಲ್ಲಿ ರಾವಣ ಸನ್ಯಾಸಿಯಂತೆ ವೇಷ ಪಲ್ಲಟಿಸಿದ "ಪಾಕಿಸ್ತಾನ"ದ ಹಕ್ಕನ್ನು ಒಪ್ಪಿಕೊಂಡದ್ದೂ ಇದೆ. ಹಾಗೆ "ರಕ್ಷಾಕವಚ"ಗಳ ಹೆಸರಲ್ಲಿ ಏರ್ಪಡಲಿರುವ

The Sterling General Insurance Co., Ltd.,
Head Office: NEW DELHI.
Paid-up Capital: Rs. 12,50,000
Branch Office for Kerala, Karnataka and Coorg:
MANGALORE.
Undertakes all Branches of Insurance.
Wanted Inspectors on Salary, and Ordinary and Special Agents on attractive terms of commission for the districts of South Kanara, North Kanara, Bijapur, Belgaum, Dharwar, Malabar, and Coorg. Selected persons will be given special training in Insurance work as well as due encouragement. The applicants will be personally interviewed by Mr. W. R. Sunita, Branch Manager Mangalore, during his tours.
APPLY TO:
W. R. SUNITA, B. A.,
Branch Manager.

ಆ ಅಡಳಿತದ ಯಂತ್ರದ ಚಕ್ರದ ಕಡೆಗೆ, ಆ ಗೋಷ್ಠಿಯವರು "ದುರುಸ್ತಿ" ಕೆಲಸದ ಹಲವಾರು ಉಳಿ ಬಾಚಿ ಕೊಡತಿ ಮೊದಲಾದ ಕಾರ್ಮಿಕ ಉಪಕರಣಗಳನ್ನು ಬಿಸಾಡಿರುತ್ತಾರೆ. ಇದರಿಂದ ನಿಯೋಗಗೋಷ್ಠಿಯವರು ಎ. ಜಿನ್ನರ ವಾದಸರಣಿಯಿಂದ ಒಂದಿಷ್ಟೂಸಮಾಧಾನ ಹೊಂದದಿದ್ದಗ್ಗೂ, ಎ. ಜಿನ್ನರ ಸಿವಿಲ್ ಯುದ್ಧ, ರಕ್ತಪಾತಗಳ ಬೆದರಿಕೆಯು, ಗೋಷ್ಠಿಯವರ ಮನಸ್ಸಿನ ಮೇಲೆ ಒಳ್ಳೇ ಪರಿಣಾಮವನ್ನೇ ಉಂಟುಮಾಡಿರಬೇಕೆಂದು ಒಬ್ಬನು ಅನುಮಾನಪಡುವ ಹಾಗಾಗಿದೆ. ಈ ಗೋಷ್ಠಿಯವರು ಎ. ಜಿನ್ನರ ಅನುಗ್ರಹ ಸಂಪಾದನೆಗಾಗಿ, ಕೇಂದ್ರದ ವ್ಯಾಪ್ತಿಯನ್ನು ಬಹಳ ಮಟ್ಟಿಗೆ ಮಿತಗೊಳಿಸುವುದರಿಂದಲೇ ಅಲ್ಲದೆ, ಪ್ರಾಂತಗಳು ಗುಂಪುಗಳಾಗಿ ಮಾರ್ಪಡಬೇಕೆಂದು ನಿರ್ಬಂಧಿಸುವ ಮೂಲಕವಾಗಿಯೂ ಅವರು ಕೇಂದ್ರವನ್ನು ದುರ್ಬಲಗೊಳಿಸಿದ್ದಾರೆ. ಗೋಷ್ಠಿಯವರು ಏರ್ಪಡಿಸಿದ ಪ್ರಾಂತಗಳ "ಏ, ಬಿ, ಸಿ" ಗುಂಪುಗಳ ನಿರ್ಮಾಣ ಎಂದಿಗೂ ಯುಕ್ತವಾಗಿಲ್ಲ; ಮಾನ್ಯವಲ್ಲ. ಪತ್ರವ್ಯವಹಾರದಲ್ಲಿ ಈ ಮೂರು ಗುಂಪುಗಳ ಸೃಷ್ಟಿ ಅಭದ್ರವೆಂದೇ ಕಂಠೋಕ್ತವಾಗಿ ಆಕ್ಷೇಪಿಸಿದುದು ಕಂಡು ಬಂದಿದೆ. ಹಿಂದೂಗಳೇ ಪ್ರಬಲವಾಗಿರುವ ಅಸಾಮನ್ನು ಬಂಗಾಳದೊಡನೆ ವರ್ಗೀಕರಿಸುವುದು ಹೇಗೆ? "ಪ್ರಾಧಾನ್ಯತೆಯಲ್ಲಿ ಹಿಂದೂಗಳದೇ ಆದ ಅಸಾಂ ಪ್ರಾಂತ"ವನ್ನು ಬಂಗಾಳದೊಡನೆ ತಂದು ಗಂಟುಹಾಕುವಬಗೆ ಹೇಗೆ? "ಮುಸ್ಲಿಮರ ಪ್ರಾಬಲ್ಯದ ಅಥವಾ ಶ್ರೇಷ್ಠತೆಯ ಪ್ರಾಂತವಲ್ಲದ ಬಂಗಾಳ"ವನ್ನೇ ಆದರೂ, ನಿಯೋಗಗೋಷ್ಠಿಯವರ ಎಣಿಕೆಯ ಮೇರೆಗಿನ "ಮುಸ್ಲಿಮರ ಪ್ರಾಧಾನ್ಯತೆಯುಳ್ಳ ಪ್ರಾಂತ"ಗಳೊಡನೆ ತಂದು ತುರುಕುವುದು ಇದು ಹೇಗೆ? ಬಂಗಾಳ ಅಸಾಮುಗಳ ಎಭಾಗ ಅಥವಾ "ಸೆಕ್ಯನ್" "ಪ್ರಧಾನವಾಗಿಯೂ ಮುಸ್ಲಿಂ" ಎಂದೂ ಅದು ಅವರದೇ ವರ್ಚಸ್ಸಿನದು ಎಂದೂ ತೋರುವ ಹಾಗೆ, ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯಲ್ಲಿ ಅವುಗಳ ರಚನೆಗಾಗಿ ಏರ್ಪಡಿಸಿರುವ ಆ ಯುಕ್ತಿಯನ್ನು ಕಂಡು ಒಬ್ಬನು ಏನೆಂದು ಭಾವಿಸಬೇಕು? ಒಟ್ಟು ಹಿಂದೂಗಳ ಅಥವಾ ಮುಸ್ಲಿಮರ ಪ್ರಾಧಾನ್ಯತೆ ಪ್ರಾಬಲ್ಯ ಇರುವುದೆಂದರೇನು? ಕಾನ್‌ಸ್ಟಿಟ್ಯುಯೆಂಟ್ ಎಸೆಂಬ್ಲಿಯಲ್ಲಿ ಬಂಗಾಳ ಅಸಾಮಿಗೆ ಒಟ್ಟಿಗೆ ಸಿಳಿ "ಸಾಮಾನ್ಯ" ಸ್ಥಾನಗಳ ಎರುದ್ಧ ೩೬ ಮಂದಿ ಮುಸ್ಲಿಂ ಪ್ರತಿನಿಧಿಗಳು ಇರುವರು. ಹೀಗೆ ಇಬ್ಬರು ಪ್ರತಿನಿಧಿಗಳ ಆಧಿಕ್ಯವೇ, "ಸಿ" ಸೆಕ್ಯನಿನಲ್ಲಿ ಮುಸ್ಲಿಮರ ಬಹುಮತವನ್ನು ಉಂಟುಮಾಡಿಕೊಡಲು ಸಾಕೆಂದೂ, ಆವೆರಡು ಹೆಚ್ಚಿನ ಓಟುಗಳೇ ಆ ಸೆಕ್ಯನಿಗೆ ಮುಸ್ಲಿಮರ ಎಶೇಷ ಲಕ್ಷಣದ ರೂಪವನ್ನು ಕೊಡಬಲ್ಲುದೆಂದೂ ಭಾವಿಸಲಾಗಿದೆ.

ಗಡಿನಾಡಿನ ಪ್ರಾಂತವನ್ನು "ಬಿ" ಸೆಕ್ಯನಿನಲ್ಲಿ ಅಥವಾ ಗುಂಪಿನಲ್ಲಿ ಸೇರಿಸಿ ಬಿಡುವ ಕುರಿತೂ ಕಾಂಗ್ರೆಸ್ ತನ್ನ ಪ್ರಬಲವಾದ ಆಕ್ಷೇಪವನ್ನೆತ್ತಿ ಮುಂದೊಡ್ಡಿದೆ. ಕಾಂಗ್ರೆಸ್ ಪ್ರೆಸಿಡೆಂಟರು ತಮ್ಮ ಪತ್ರದಲ್ಲಿ—ಈ ಪ್ರಾಂತವು ಕಳೆದ ಜುನಾವಣೆಯಲ್ಲಿ ನಿರ್ದಿಷ್ಟವಾದ ಬಹುಮತದ ಪ್ರದರ್ಶನದ ಮೂಲಕ, ಪಾಕಿಸ್ತಾನ ಕ್ಷೇತ್ರಕ್ಕೆ ತಾನು ಸೇರಿಸಲ್ಪಡಲು ಸರ್ವ ಪ್ರಕಾರದಿಂದಲೂ ನಿರಾಕರಿಸುತ್ತಿರುವುದೆಂಬ ಅಂಶವನ್ನು ಸ್ಪಷ್ಟಗೊಳಿಸಿದ್ದಾರೆ. ಆದರೆ ವಿಚಿತ್ರವೇನೆಂದರೆ—ನಿಯೋಗಗೋಷ್ಠಿ ಕಾಂಗ್ರೆಸಿನ ಈ ಆಕ್ಷೇಪಗಳಿಗೆ ಕೊಂಚವೂ ಲಕ್ಷ್ಯ ಕೊಟ್ಟಿಲ್ಲ; ಅದನ್ನು ಪ್ರಾಮುಖ್ಯವೆಂದು ಎಣಿಸಿಲ್ಲ ಬದಲಾಗಿ ಈ ಬಗೆಯ ಅಯುಕ್ತ ಏರ್ಪಾಡುಗಳ ಗ್ರಹಚಾರ ಶಾಂತಿಗಾಗಿ ಈ ಬಾಲಗ್ರಹದ ಉಪಶಮನಾರ್ಥವಾಗಿ ತಾನು ಸೇರಿಸಲ್ಪಟ್ಟಿರುವ ಯಾವುದೊಂದು ಗುಂಪಿನಿಂದಾದರೂ ಯಾವದೊಂದು ಪ್ರಾಂತಕ್ಕಾದರೂ ಹೊರಬರುವ ಹಕ್ಕೋ ಅಧಿಕಾರವೋ ಇದ್ದೇ ಇದೆ ಎಂಬ ಈ ಮಂತ್ರಪಾರಾಯಣವನ್ನೇ ಮಾಡತೊಡಗಿದೆ. ತೋರಿಕೆಯ ಮಟ್ಟಿಗೆ ಇದು ಸರಿಯೇ. ಆದರೆ, ಒಂದು ಗುಂಪಿನಲ್ಲಿ ಒಂದು ಪ್ರಾಂತವು ಉಳಿಯುವಂತೆ ಅಥವಾ ಅದರಿಂದ ಹೊರ ಬರುವಂತೆ ಈ ತೀರ್ಮಾನ ಮಾಡುವ ಹಕ್ಕು ಅಥವಾ ಅಧಿಕಾರ ಆ ಪ್ರಾಂತಗಳಿಗೆ ಯಾವಾಗ ಬರುತ್ತದೆ ಒಲ್ಲಿರಾ? ಆ ಗುಂಪು ಅದಕ್ಕಾಗಿ ಒಂದು ರಾಜ್ಯಘಟನೆಯನ್ನು ತಯಾರಿಸಿ ಆ ಘಟನೆಯ ಮೇರೆಗೆ ಪ್ರಥಮ ಜುನಾವಣೆಯು ನಡೆದ ಮೇಲೆ ಮಾತ್ರ. ಹಾಗಾದರೆ ಆ ಸಂದರ್ಭದಲ್ಲಿ ಆ ಗುಂಪಿಗಾಗಿ ನಿರ್ಮಾಣವಾಗಲಿರುವ ಆ ರಾಜ್ಯಘಟನೆಯು "ಮೈನಾರಿಟಿ" (ಅಲ್ಪ ಸಂಖ್ಯೆಯವರು)ಯವರನ್ನು "ಮೆಜಾರಿಟಿ" (ಬಹು ಸಂಖ್ಯೆಯವರು)ಯವರನ್ನಾಗಿಯೂ, ಬಹು ಸಂಖ್ಯೆಯವರನ್ನು ಅಲ್ಪ ಸಂಖ್ಯೆಯವರನ್ನಾಗಿಯೂ ಮಾರ್ಪಡಿಸುವಷ್ಟು ಯುಕ್ತಿ ಚಾತುರ್ಯಗಳಿಂದ—ಅಂಥ ಐಂದ್ರಜಾಲಿಕ (ಗಾರುಡಿ)ವಿದ್ಯೆಯಿಂದ—ನಿರ್ಮಾಣವಾಗಬಹುದು, ಆ ರೀತಿಯಲ್ಲಿ ಆ ಘಟನೆಯನ್ನು ತಯಾರಿಸಲು ಬರುವುದು ಎಂಬೀ ಅಂಶವನ್ನು ನಿಯೋಗಗೋಷ್ಠಿಯವರು ತಿಳಿದೂ ತಿಳಿಯದಂತೆ ಮರೆತು ಕಣ್ಣು ಮುಚ್ಚಿದ್ದು ಎಂಥ ಪ್ರಮಾದ! ಅದು ಹೇಗಿದ್ದರೂ ವಿದೇಶೀ ಕಾರ್ಯಭಾರ, ರಕ್ಷಣೆ, ವಹಿವಾಟ ಮಾರ್ಗಸಾಧನ ಇವುಗಳ ಹೊರತಾಗಿ ಎಲ್ಲ ಎಲ್ಲ ವಿಷಯಗಳಲ್ಲಿಯೂ ಸಾರ್ವಭೌಮತಿಕೆಯ ಗುಣಲಕ್ಷಣಗಳನ್ನೇ ಪಡೆಯುವ ಒಂದು ಪ್ರಾಂತವು ಇಂಥದೇ ಒಂದು ಗುಂಪಿಗೆ ಕಡ್ಡಾಯವಾಗಿಯೂ ಸೇರಲೇ ಬೇಕೆಂದು ಏತಕ್ಕೆ ಬಲೋದ್ಬಂಧಿಯಿಂದ ಒತ್ತಾಯಪಡಿಸಬೇಕೋ ದೇವರೇ ಬಲ್ಲ! ಒಂದು ವೇಳೆ ಒಂದು ಪ್ರಾಂತವು ಇಂಥದೇ ಒಂದು ಗುಂಪನ್ನು ಸೇರಬೇಕೋ ಬೇಡವೋ ಎಂಬುದನ್ನು ಮೊದಲೇ ನಿಶ್ಚಯಿಸುವಂತೆ ಅದನ್ನು ಬಿಟ್ಟುಬಿಟ್ಟರೇನು ಹಾನಿಯೋ ಅದೂ ದೇವರೇ ಬಲ್ಲ! ಮುಖ್ಯ ಸ್ವಾತಂತ್ರ್ಯವಿಲ್ಲದ ಈ "ಸಾರ್ವಭೌಮತಿಕೆ" ಇನ್ನು ಎಂಥದಿರಬಹುದೋ!

ವಿದೇಶೀ ಕಾರ್ಯಭಾರ, ರಕ್ಷಣೆ, ವಹಿವಾಟ ಮಾರ್ಗಸಾಧನಗಳೇ ಮಾತ್ರವಲ್ಲದೆ ಪ್ರಾಂತಗಳ ಮತ್ತು ಒಟ್ಟು ಹಿಂದು ಸ್ಥಾನದ ಹಿತದೃಷ್ಟಿಯಿಂದ ನೋಡುವಲ್ಲಿ ನೋಟು, ನಾಣ್ಯ, ಕಸ್ಟಮ್ಸ್, ಸುಂಕ, ಮೊದಲಾದುವುಗಳೂ ಅವುಗಳೊಡನೆ ಸಮೂಪ ಸಂಪರ್ಕವಿರುವ ಇತರ ವಿಷಯಗಳಾದ ಯೋಜನೆ (ಪ್ಲಾನಿಂಗ್) ಇತ್ಯಾದಿಗಳೂ ಫೆಡರಲ್ ಯೂನಿಯನ್ ಸರಕಾರದ ವಶದಲ್ಲಿಯೇ ಇರಬೇಕೆಂದು ಕಾಂಗ್ರೆಸಿನವರು ಕೇಳಿರುತ್ತಾರೆ. ಆದರೆ ಈ ಸಂದರ್ಭದಲ್ಲಿ ಬ್ರಿಟಿಷ್ ನಿಯೋಗ ಗೋಷ್ಠಿಯವರು ಅಮೆರಿಕ ಸಂಸ್ಥಾನಗಳ ಮಾದರಿಯನ್ನು ಅನುಸರಿಸಿಯೇ ತಮ್ಮ ಈ ಯೋಜನೆಯ ಅಮೋಘ ಸೂಚನೆಗಳನ್ನೂ ರೂಪಿಸಿದ್ದಾರೆಂದು ಹೇಳಲಾಗಿದೆ. ಇದು ಶುದ್ಧ ಠಕ್ಕು ಎನ್ನಲಾಗದಿದ್ದರೆ, ಇದು "ಸತ್ಯದಿಂದ ಬಹುದೂರ"ವೆಂದು ಗೌರವಯುಕ್ತವಾಗಿ ಹೇಳಲು ಅಡ್ಡಿ ಏನೂ ತೋರದು. ಏತಕ್ಕೆಂದರೆ ಅಮೇರಿಕಾ ಸಂಸ್ಥಾನಗಳಲ್ಲಿ ಆ ಫೆಡರಲ್ ಸರಕಾರಕ್ಕೆ ಸೇರತಕ್ಕ ವಿಷಯಗಳು, ನಮ್ಮ ಕಾಂಗ್ರೆಸಿನವರು ಸೂಚಿಸಿರುವ ಆ ವಿಷಯಗಳನ್ನು ಒಳಗೊಂಡಿರುವುದಷ್ಟೇ ಅಲ್ಲ; ಇನ್ನೂ ಎಷ್ಟೋ ವಿಷಯಗಳನ್ನೂ (ಇಲಾಖೆಗಳನ್ನೂ) ಒಳಗೊಂಡಿರುವುದು ಕಾಗದಪತ್ರಗಳ ಮತಲಬಿನ ಮೇರೆಗೆ—ಕಾಂಗ್ರೆಸ್ ಫೆಡರಲ್ ಕೇಂದ್ರದಲ್ಲಿನ ಬಹುಸಂಖ್ಯಾಕರ ಅಧಿಕಾರ ಬಲವನ್ನು ಕುಗ್ಗಿಸುವಲ್ಲಿ ಸಾಧ್ಯವಿರುವಷ್ಟು ದೂರವೂ ಹೋಗಿರುವುದಲ್ಲದೆ, ರದ್ದಿಯಾತಿನ ಅಧಿಕಾರವನ್ನು ಮೈನಾರಿಟಿ ಅಥವಾ ಅಲ್ಪ ಸಂಖ್ಯಾಕರ ಕೈಯಲ್ಲಿಯೇ ಇರಿಸಿದೆ ಎಂಬುದೂ ಸ್ಪಷ್ಟವಾಗುತ್ತದೆ. ಪ್ರಾಮುಖ್ಯವಾದ ಜಾತೀಯ ಪ್ರಶ್ನೆಗಳೇನಿದ್ದರೂ ಅವು, ಆಯಾ ಜಾತಿ ಅಥವಾ ಸಮಾಜದ ಪ್ರತಿನಿಧಿಗಳ ಒಪ್ಪಿಗೆಯ ಹೊರತಾಗಿ ಬೇರೆ ಯಾವ ರೀತಿಯಿಂದಲೂ ತೀರ್ಮಾನವಾಗಕೂಡದೆಂಬುದಕ್ಕೆ ಕಾಂಗ್ರೆಸ್ ತನ್ನ ಒಪ್ಪಿಗೆ ಕೊಟ್ಟಿದೆ.

ಕಾಂಗ್ರೆಸಿನವರು ಲೀಗಿನವರನ್ನೂ ಎ. ಜಿನ್ನರನ್ನೂ ಸಾಧ್ಯವಿರುವಷ್ಟು ಆದರದಿಂದ ನಡೆಸಿಕೊಂಡು ಹೋಗಿದ್ದಾರೆ; ರಿಯಾಯಿತಿ ತೋರಿಸಿದ್ದಾರೆ. ನಿಯೋಗಗೋಷ್ಠಿಯವರಂತೂ ನ್ಯಾಯವಾದ ಮೇರೆಯನ್ನೂ ಮೀರಿ ಲೀಗಿನವರಿಗೆ ಉಪಕಾರ ಮಾಡಿದ್ದಾರೆ. ಇದರ ಉಡುಗೊರೆ—ಲೀಗಿನವರು ನಿಯೋಗಗೋಷ್ಠಿಯವರನ್ನು ಬಾಯಿ ತುಂಬ ದೂರುತ್ತಿರುವುದು; ಜತೆಯಲ್ಲಿ ಕಾಂಗ್ರೆಸಿನವರ ಮೇಲೆಯೂ ಚಾಡಿ ತರಳೆ ಹೇಳುತ್ತಿರುವುದು; ವಾಗ್ಬಾಣಗಳನ್ನು ಸಾರೋದ್ಧಾರವಾಗಿ ಪ್ರಯೋಗಿಸುತ್ತಿರುವುದು!

——

ಈಜಿಪ್ಟಿನಲ್ಲಿ ಅಸಮಾಧಾನ

ಈಜಿಪ್ಟಿನವರಿಗೆ ಬ್ರಿಟಿಶರ ಕಾರ್ಯನೀತಿಯಿಂದ ತೃಪ್ತಿಯಾಗದೆ ಅವರು ಸಂಪೂರ್ಣ ಸ್ವಾತಂತ್ರ್ಯವನ್ನೇ ಕೇಳುತ್ತಿದ್ದಾರೆ.

ಉಲ್ಲಾಸವಾಗಿ ಆರೋಗ್ಯವಾಗಿ ಮತ್ತು ಸಪುರವಾಗಿ ಏಕೆ ಇರಬಾರದು?

ಕ್ರಮವಾಗಿ ಪ್ರತಿ ರಾತ್ರಿಯೂ ಎರಡು ಬೈಲ್ ಬೀನ್ಸ್‌ಗಳನ್ನು ಸೇವಿಸುವ ಅಮೂಲ್ಯ ಸೂತ್ರವನ್ನು ಅನುಸರಿಸಿದಲ್ಲಿ ನೀವು ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಆತ್ಯುತ್ತಮ ಜೈತನಗೊಂಡಿದ್ದು, ಜೀವನದ ಪೂರ್ಣ ಸುಖವನ್ನು ಅನುಭವಿಸಬಹುದು.

ಬೈಲ್‌ಬೀನ್ಸ್ ಉತ್ತೇಜಿತ ಆರೋಗ್ಯ ಮತ್ತು ಕಸುವು ಉಂಟುಮಾಡುವುದಲ್ಲದೆ, ಅಂಗಕೌಂತಿಯನ್ನು ಸ್ವಚ್ಛಗೊಳಿಸುವುದು ಮತ್ತು ನಿಮ್ಮ ದೇಹಾಕೃತಿಯನ್ನು ಸಪುರವಾಗಿ ಹಾಗೂ ಯೌವನವಾಗಿಡುತ್ತವೆ.

ಪ್ರತಿದಿನವೂ 1,000,000 ಕ್ಕೆ ಮೇಲ್ಪಟ್ಟು ಬೈಲ್ ಬೀನ್ಸ್ ಮಾರಲ್ಪಡುತ್ತವೆ.

ಎಲ್ಲಾ ಔಷಧಿ ವ್ಯಾಪಾರಿಗಳು ಬೈಲ್ ಬೀನ್ಸ್‌ಗಳನ್ನು ಸ್ಟಾಕ್ ಮಾಡುತ್ತಾರೆ.

ಏಜಂಟರು:—ಮೆಸ್ಸರ್ಸ್ ದಾಫಾ ಎಂಡ್ ಕೊ., ಪಿ. ಟಿ. ಮದ್ರಾಸು.

ಬೈಲ್ ಬೀನ್ಸ್ ಈ ತೆರ ಮಾಡುತ್ತವೆ: ಬೈಲ್ ಬೀನ್ಸ್ ಶುದ್ಧ ವನಸ್ಪತಿ ಸಾರಗಳಿಂದ ತಯಾರಿಸಿದ್ದಾಗಿವೆ; ಅದು ಕಾರಣ ಪೂರ್ಣ ನಂಬಿಕೆಯಿಂದ ಇವನ್ನು ಕ್ರಮವಾಗಿ ಪ್ರತಿ ರಾತ್ರಿಯಲ್ಲೂ ಸೇವಿಸಬಹುದು. ಇವು ಜೀರ್ಣವನ್ನು ಉತ್ತೇಜಿಸಿ, ರಕ್ತವನ್ನು ಶುದ್ಧ ಮಾಡಿ, ಕೊಬ್ಬುಂಟಾಗುವ ಮಲ ಪದಾರ್ಥವನ್ನು ದಿನವೂ ತೆಗೆಯುತ್ತವೆ; ಹಾಗೆ, ನಿಮ್ಮನ್ನು ಉಲ್ಲಾಸವಾಗಿ, ಆರೋಗ್ಯವಾಗಿ ಮತ್ತು ಜೀವನವಾಗಿರಿಸುತ್ತವೆ.

BILE BEANS

ಬೈಲ್ ಬೀನ್ಸ್ ನಿಮ್ಮನ್ನು ಉಲ್ಲಾಸವಾಗಿ ಮತ್ತು ಆರೋಗ್ಯವಾಗಿರಿಸುತ್ತವೆ.

ಇಂಡೋನೇಸ್ಯ, ಇಂಡೋಚೀನ, ಸಿಯಾಮು - ಬ್ರಿಟಿಷ್ ಜನಾಂಗಗಳ ಕಾಮನ್‌ವೆಲ್ತ್

ಹಿಂದೀ ಆಹಾರ, ಸ್ವಾತಂತ್ರ್ಯ ಸಮಸ್ಯೆ

ಅಮೇರಿಕವು ಆಟಂ ಬಾಂಬಿನ ಪ್ರಯೋಗದಿಂದ ಜಪಾನೀ ಯುದ್ಧವನ್ನು ಸುಲಭದಲ್ಲಿ ಅಂತ್ಯಗೊಳಿಸಿ, ಎದೆರ ಜಪಾನೀಯರು ತನ್ನ ಶರಣನ್ನು ಬೇಡುವಂತೆ ಮಾಡಿ ಬಿಟ್ಟಿತು. ಆದರೆ ಜಪಾನೀಯರ ಸ್ವಾಧೀನವಿದ್ದ ಪೂರ್ವ ಆಸ್ಯ ಪ್ರದೇಶವು ಇನ್ನೂ ಶಾಂತತೆಯನ್ನು ಪಡೆದ್ದಿಲ್ಲ. ಇಂಡೋನೇಸ್ಯದಲ್ಲಿ ಜಪಾನಿನ ಆಳಿಕೆಯು ಅಂತ್ಯವಾಗುವ ಮೊದಲೇ ಸ್ವತಂತ್ರ ಪ್ರಜಾಸಮ್ಮತ ರಿಪಬ್ಲಿಕ್ ಸ್ಥಾಪನೆಯಾಯಿತು. ಆದರೆ ಆ ರಿಪಬ್ಲಿಕು ಸ್ವದೇಶೀಯರಿಂದೆಲ್ಲಾ ಮನ್ನಿಸಲ್ಪಟ್ಟರೂ ಕಾರಣಾಂತರಗಳಿಂದ ಈ ತನಕ ಅದಕ್ಕೆ ತನ್ನ ರಾಜ್ಯಭಾರದ ಕಾರ್ಯಗಳನ್ನು ಕೈಕೊಳ್ಳಲಿಕ್ಕೆ ಸಂಪೂರ್ಣ ಬಲವಾಗಲಿ ಅವಕಾಶವಾಗಲಿ ದೊರೆತಿಲ್ಲ, ಯುದ್ಧಾಂತ್ಯದ ಬಳಿಕ ಚೀನ, ಜಪಾನು, ಫಿಲಿಪ್ಪೈನುಗಳಲ್ಲಿಯೇ ಅಮೇರಿಕವು ತನಗೆ ಸಾಕಷ್ಟು ಕಾರ್ಯರಂಗವನ್ನು ಕಂಡದ್ದರಿಂದ, ಆಗ್ನೇಯ ಆಸ್ಯವನ್ನು ಬ್ರಿಟಿಷರ ಕೈಗೆ ಬಿಟ್ಟತ್ತು. ಬ್ರಿಟಿಶರ ಸಹಾಯದಿಂದ ಫ್ರೆಂಚರು ಇಂಡೋ ಚೀನದಲ್ಲಿ ಪುನಃ ಪ್ರವೇಶಿಸಿ, ಅಲ್ಲಿ ದೇಶೀಯರೊಡನೆ ಹೋರಾಡಿ, ಕೊನೆಗೆ ಅವರೊಡನೆ ಸಂಧಾನವನ್ನು ಬೆಳೆಸಿ ಪುನಃ ತಮ್ಮ ವರ್ಚಸ್ಸನ್ನು ಆಸ್ಯದ ಆಗ್ನೇಯ ಭಾಗದಲ್ಲೀಗ ಸ್ಥಾಪಿಸಿರುತ್ತಾರೆ. ಇಂಡೋ ಚೀನದಲ್ಲಿ ಬ್ರಿಟಿಶರಿಗೆ ಸ್ವಂತಕ್ಕೇನೂ ಬೇಕಾಗಿರಲಿಲ್ಲ. ಇಂಡೋನೇಸ್ಯದಂತೆ ಇಂಡೋಚೀನವು ಜನನಿಬಿಡತೆಯಿರುವ ಪ್ರದೇಶವೂ ಅಲ್ಲ; ಫಲವತ್ತಾದ ಭೂಮಿಯೂ ಅಲ್ಲ. ಆದ್ದರಿಂದ ಅಲ್ಲಿ ಹೋರಾಟವು ಬೇಗನೆ ಮುಗಿಯಿತು.

ಇಂಡೋನೇಸ್ಯವೆಂದರೆ ದ್ವೀಪಗಳ ಸಾಮ್ರಾಜ್ಯ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಒಸ್ಪೇಯದೊಡನೆ ಸಂಬಂಧವುಳಿದು ಶಾಂತಸಾಗರದಾಚೆಯಿಂದ ಗಂಡಾಂತರಗಳು ಬಾರದಂತಾಗಬೇಕಾದರೆ ಇಂಡೋನೇಸ್ಯವು ಬ್ರಿಟಿಷರ ಹಿತಚಿಂತಕವಾಗಿ ಬ್ರಿಟಿಷ್ ಆಶ್ರಯದಲ್ಲಿರುವವರಿಂದಲೇ ಪಾಲಿತವಾಗಬೇಕು. ಇಂಡೋನೇಸ್ಯದಲ್ಲಿ ಜನಸಂಖ್ಯೆಯೂ ಆರ್ಥಿಕ ಸಂಪತ್ತೂ ತುಂಬಿವೆ. ಆಂಗ್ಲರ ಭಂಡವಾಳವು ಅಲ್ಲಿ ಯಥೇಷ್ಟ ಸುರಿಯಲ್ಪಟ್ಟಿದೆ. ಆದ್ದರಿಂದ ತಮ್ಮ ಮಿತ್ರರೂ ಆಶ್ರಿತರೂ ಆದ ಡಚ್ಚರನ್ನು ಇಂಡೋನೇಸ್ಯದಲ್ಲಿ ಪುನಃ ಪ್ರತಿಷ್ಠಿಸಬೇಕೆಂದು ಆಂಗ್ಲರು ಪ್ರಯತ್ನಪಡಲಿಕ್ಕೆ ಕಾರಣವಾಯಿತು.

ಆಂಗ್ಲರು ಇಂಡೋನೇಸ್ಯದಲ್ಲಿ ಡಚ್ಚರ ಸಹಾಯಕ್ಕೆಂದು ಕಾಲಿಡುವಾಗ ಅಲ್ಲಿಯ ಒಳಗಣ ಸ್ಥಿತಿಯು ಆಂಗ್ಲರಿಗಾಗಲಿ ಭೂಲೋಕದ ಇತರರಿಗಾಗಲಿ ತಿಳಿದಿರಲಿಲ್ಲ. ಜಪಾನಿನ ಸಂಪರ್ಕದಿಂದ ಇಂಡೋನೇಸ್ಯದ ಜನರಲ್ಲಿ ಸ್ವಾತಂತ್ರ್ಯದ ಪುಬಲದಾಶೆಯೂ ಆ ಆಶೆಯನ್ನು ನೆರವೇರಿಸಿಕೊಳ್ಳಲಿಕ್ಕೆ ಬೇಕಾಗುವಷ್ಟು ಸಂಘಟಿತ ಸಮರ ಶಕ್ತಿಯೂ ಜನಿಸಿದ್ದವು; ಈ ಶಕ್ತಿಯನ್ನು ತಗ್ಗಿಸಿ ಡಚ್ಚರನ್ನಲ್ಲಿ ಪುನಃ ಪ್ರತಿಷ್ಠಿಸಲಿಕ್ಕೆ ಆಂಗ್ಲರಿಂದ ಸಾಧ್ಯವಾಗದೆ, ಅನೇಕ ಬಲೊದ್ಬಂದಿ ಅತ್ಯಾಚಾರಗಳಿಗೆ ಕಾರಣವಾಯಿ, ಕೊನೆಗೆ ಡಚ್ಚರು ಇಂಡೋನೇಸ್ಯದವರೊಡನೆ ಸಂಧಾನ ಮಾಡಿಕೊಂಡೇ ಮುಂದಿನ ಕಾರ್ಯಗಳಾಗಬೇಕೆಂಬದು ಆಂಗ್ಲರಿಗೆ ತಿಳಿದು ಬಂತು. ಆಂಗ್ಲರ ಅಂತರಂಗದ ಒತ್ತಾಯದಿಂದ ಈಗ ಕೆಲವು ತಿಂಗಳಿಂದೀಚೆ ಇಂಡೋನೇಸ್ಯ—ಹೊಲ್ಲಾಂಡುಗಳಲ್ಲಿ ಸಂಧಾನದ ಪ್ರಸ್ತಾಪಗಳು ನಡೆಯುತ್ತಲಿವೆ. ಆದರೆ ಈ ಪ್ರಸ್ತಾಪಗಳು ಸಫಲವಾಗುವಂತಿಲ್ಲ ಇಂಡೋನೇಸ್ಯದಲ್ಲೀಗ ಒಕ್ಕಟ್ಟಿದೆ; ಅಲ್ಲಲ್ಲಿದ್ದ ಸುಲ್ತಾನರೂ ಸಾಮಾನ್ಯ ಜನರೊಡನೆ ಸ್ವಾತಂತ್ರ್ಯ ಸಮರದಲ್ಲಿ ಸೇರಿರುತ್ತಾರೆ. ಕುಟಿಲ ರಾಜನೀತಿಯ ಬೀಜಗಳನ್ನು ಬಿತ್ತಿ, ಜನರಲ್ಲಿ ಪರಸ್ಪರ ವಿರೋಧವನ್ನುಂಟು ಮಾಡ ಸಾಧ್ಯವಿಲ್ಲ. ಡಚ್ಚರಿಗೆ ಇಂಡೋನೇಸ್ಯವು ತಪ್ಪಿದರೆ ಎಲ್ಲವೂ ಹೋದಂತಾಗುವದು; ಹೊಲ್ಲಾಂಡಿನ ಬಿಳೀ ಜನರು ಬಳಿಕ ಕಪ್ಪು ಜನರಂತೆ ಅರ್ಧನಗ್ನ ಶರೀರ, ಅರ್ಧ ತುಂಬಿದ ಹೊಟ್ಟೆಯ ಜೀವನವನ್ನು ಕೈಕೊಳ್ಳಬೇಕಾಗುವದು. ಡಚ್ಚರು ಹೋರಾಡಿ, ಹೋರಾಡಿ ಸಾಕಾಗಿ,—ಈಗ ಇಂಡೋನೇಸ್ಯದವರೊಡನೆ ಸಂಧಾನ ಬೆಳೆಸಿ ಪುನಃ ತಮ್ಮ ಆರ್ಥಿಕ ಬಲವನ್ನು ಫಳಿಸಬೇಕೆಂದಿದ್ದಾರೆ. ಇಂಡೋನೇಸ್ಯದವರಿಗೆ ಡಚ್ಚರ ಸಂಪರ್ಕವು ಎಷ್ಟು ಮಾತ್ರಕ್ಕೂ ಸಮ್ಮತವಿಲ್ಲ. ಡಚ್ಚರ ಸಾಮ್ರಾಜ್ಯವು ಆಸ್ಯದಿಂದ ಬೇಗನೇ ಅಳಿಸಿ ಹೋಗುವಂತಿದೆ.

ಅತ್ತ ಇಂಡೋಚೀನ, ಸಿಯಾಮುಗಳಲ್ಲಿ ಹೋರಾಟಕ್ಕೆ ಪ್ರಾರಂಭವಾಗಿಯದೆ. ಇಂಡೋ ಚೀನದಲ್ಲಿ ಸಿಯಾಮಿನ ಗಡಿಯಲ್ಲಿರುವ ಕಾಂಭೋಜವು ಆಶ್ರಿತ ಅರಸರ ಸ್ವಾಧೀನವಿದೆ. ಕಾಂಭೋಜಕ್ಕೂ ಸಿಯಾಮಿಗೂ ನಡುವೆ ಅತ್ಯಂತ ಫಲವತ್ತಾದ ಪ್ರದೇಶವೊಂದಿದೆ- ಆ ಫಲವತ್ತಾದ ಪ್ರದೇಶದ ಕುರಿತು ಅನೇಕ ಕಾಲದಿಂದ ವಿವಾದವಿದೆ. ಈ ಪ್ರದೇಶವನ್ನು ಹಿಂದೆ ೧೯೦೭ರಲ್ಲಿ ಸಿಯಾಮಿನ ವಶದಿಂದ ಫ್ರೆಂಚರು ಕಿತ್ತು ಕಾಂಭೋಜಕ್ಕೆ ಸೇರಿಸಿದ್ದರು. ಕಳೆದ ಮಹಾಯುದ್ಧದಲ್ಲಿ ಫ್ರೆಂಚರು ಹಿಟ್ಲರನೊಡನೆ ಹೋರಾಡಿ ಸೋತು, ದೇಶದ ಸ್ವಾತಂತ್ರ್ಯವನ್ನು ಕಳಕೊಂಡ ಮೇಲೆ ಇಂಡೋಚೀನವು ಜಪಾನೂ ಆಶ್ರಯವನ್ನು ಸ್ವೀಕರಿಸಬೇಕಾಯಿತು. ಸಿಯಾಮು ಕಳೆದ ಯುದ್ಧದ ಮೊದಲಿಂದಲೇ ಜಪಾನಿನೊಡನೆ ಮೈತ್ರಿತ್ವದಲ್ಲಿದ್ದು, ಜಪಾನಿನೊಡನೆ ಯುದ್ಧಕ್ಕೆ ಸೇರಿದ್ದರಿಂದ, ಸಿಯಾಮಿನಿಂದ ಫ್ರೆಂಚರು ಕಿತ್ತ ಪ್ರದೇಶವನ್ನು ಜಪಾನೀಯರು ಫ್ರೆಂಚರಿಂದ ಸಿಯಾಮಿಗೆ ಪುನಃ ಕೊಡಿಸಿದರು. ಆದರೆ ಆ ಪ್ರದೇಶದ ಕುರಿತಿರುವ ವಿವಾದವು ಇನ್ನೂ ಮುಗಿದಿರುವುದಿಲ್ಲ. ಈಗ ಫ್ರಾನ್ಸು ಇಂಡೋಚೀನಗಳೊಳಗೆ ಸಂಧಾನವಾದ ಪ್ರಕಾರ ಇಂಡೋಚೀನದಲ್ಲೆಲ್ಲಾ ಒಳ ಸ್ವಾತಂತ್ರ್ಯವು ದೇಶೀಯರಿಗೆ ಸಂಪೂರ್ಣ ದೊರಕಿದ್ದರೂ ಅಲ್ಲಿ ಹೊರದೇಶಗಳೊಡನೆ ವ್ಯವಹಾರವನ್ನು ಬೆಳೆಸುವ ಅಧಿಕಾರವು ಇನ್ನೂ ಫ್ರೆಂಚರ ಕೈಯಲ್ಲೇ ಇದೆ. ಕಾಂಭೋಜದ ಸಂಸ್ಥಾನಾಧಿಪತಿಯು ಫ್ರೆಂಚರ ಪ್ರೀತಿಗೆ ಸಂಪೂರ್ಣ ಪಾತ್ರನಾದವನು. ಅವನ ಹಕ್ಕು ಬಾಧ್ಯತೆಗಳನ್ನು ಸಾಧಿಸಲಿಕ್ಕಾಗಿ ಫ್ರೆಂಚರು ಸಿಯಾಮಿನೊಡನೆ ಮಾತುಕತೆಗಳನ್ನು ಇತ್ತೀಚೆ ಬೆಳಸ ಪ್ರಾರಂಭಿಸಿದ್ದರು. ಆ ಮಾತುಕಥೆಗಳೆಲ್ಲಾ ಈಗ ನಿರರ್ಥಕವಾಗಿ, ಎವಾದದ ಇತ್ಯರ್ಥವನ್ನು ಬೇರೆ ರೀತಿಯಿಂದ ಮಾಡಲಿಕ್ಕೆಂದು ಫ್ರೆಂಚ್ ಸೇನೆಯು ಸಿಯಾಮಿನ ಕೈಕೆಳಗಿರುವ ಪ್ರದೇಶದಲ್ಲೀಗ ಕಾಲಿಟ್ಟಿದೆ. ಸಿಯಾಮು ಈ ಕುರಿತು ಸಂಯುಕ್ತ ಜನಾಂಗ ಸಂಸ್ಥೆಯೊಡನೆ ದೂರು ಕೊಟ್ಟಿದೆಯೆಂದು ತಿಳಿದು ಬರುತ್ತದೆ. ಸಿಯಾಮಿನಲ್ಲಿಯೂ ಇಂಡೋನೇಸ್ಯದಲ್ಲಿಯೂ ಹಿಂದುಸ್ಥಾನಕ್ಕೆ ದೊರಕಬಹುದಾದ ಧಾರಾಳ ಅಕ್ಕಿ ಇದೆ. ಆದರೆ ಈ ಗೊಂದಲಗಳಿಂದಾಗಿ ಆ ಅಕ್ಕಿ ಹಿಂದೀಯರಿಗೆ ಸಿಕ್ಕುವಂತಿಲ್ಲವೆಂದು ತೋರುತ್ತದೆ. ಸ್ವಾತಂತ್ರ್ಯರಹಿತವಾದ ಹಿಂದುಸ್ಥಾನಕ್ಕೆ ಹತ್ತಿರದ ಪ್ರದೇಶಗಳಿಂದ ಕೂಡ ಅಕ್ಕಿ ಬರಲಿಕ್ಕೆ ಈ ರೀತಿಯ ಅನೇಕ ಕಷ್ಟಗಳು ಬಂದೊದಗಿರುತ್ತವೆ ಆಗ್ನೇಯ ಆಸ್ಯವು ಶಾಂತವಾಗಬೇಕಾದರೆ, ಇಂಡೋನೇಸ್ಯದ ಸ್ವಾತಂತ್ರ್ಯವು ಸ್ಥಿರವಾಗಬೇಕಾದರೆ ಹಿಂದೀ ಸಮಸ್ಯೆಯು ಪರಿಹಾರವಾಗಿ ಹಿಂದುಸ್ಥಾನಕ್ಕೆ ಬಲವೊದಗಬೇಕು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕದ್ದರಿಂದ, ಇಂಡೋನೇಸ್ಯ, ಸಿಯಾಮು, ಇಂಡೋಚೀನಗಳ ಅಕ್ಕಿಯು ಹಿಂದುಸ್ಥಾನಕ್ಕೆ ಮುಟ್ಟುವುದಕ್ಕೂ ಆ ದೇಶಗಳಲ್ಲಿ ಶಾಂತಿಸ್ಥಾಪನೆಯಾಗಲಿಕ್ಕೂ ಕಷ್ಟಗಳು ತಪ್ಪುವುದಿಲ್ಲ.

ಅತ್ತ ಆಂಗ್ಲ ಅಮೇರಿಕಗಳಿಗೂ ರಷ್ಯಕ್ಕೂ ಇನ್ನೂ ಎವಾದಗಳು ಕಡಿಮೆಯಾಗಿರುವುದಿಲ್ಲ. ಸ್ಟೇಲಿನನು ರಶ್ಯವನ್ನು ಬಿಟ್ಟು ಲಂಡನ್ನಿಗಾಗಲೀ ವಾಶಿಂಗ್ಟನಿಗಾಗಲಿ ಹೋಗ ಸಮ್ಮತಿಸುವುದಿಲ್ಲ; ಅತನ ಅಂತರಂಗವೇ ನಿರಬಹುದೆಂದು ಆಂಗ್ಲ ಅಮೇರಿಕಗಳಿಗೆ ಕಂಡುಹಿಡಿಯ ಸಾಧ್ಯವಿಲ್ಲ. ಅಮೆರಿಕದಿಂದ ಇತ್ತೀಚೆ ಪ್ರಬಲ ಎಚ್ಚರಿಸಪಡೆಯೊಂದು ಯುರೋಪಿಗೆ ಹೋಗಿರುತ್ತದೆ. ಅದು ಇನ್ನು ರಶ್ಯದ ಪಶ್ಚಿಮ ಗಡಿಯನ್ನು ದೃಷ್ಟಿಸಿಕೊಂಡೇ ಇರುವುದು. ಅತ್ತ ಮಧ್ಯ ಪ್ರಾಚ್ಯದಲ್ಲಿ ಆಂಗ್ಲರು ತಮ್ಮ ಏಮಾನ ನಿರ್ಲಾಣಗ

(ಒನೇ ಪುಟ ನೋಡಿ)



ಎ ಮತ್ತು ಡಿ ವಿಟಮಿನ್‌ಗಳಿಂದ ಸಮೃದ್ಧ

ವಿಟಮಿನ್ ಏಯ 12,000 ಐ. ಯು/ಜಿ
ವಿಟಮಿನ್ ಡಿಯ 1,000 ಐ. ಯು/ಜಿ

ಇದನ್ನು ಸೇವಿಸುವ ಪ್ರಮಾಣ ಬಿಂದುಗಳಲ್ಲಿ- ಹಾಲು ಅಥವಾ ಕಿತ್ತಳೇ ರಸದೊಡನೆ ತೆಗೆದುಕೊಳ್ಳುವದು ಸುಲಭ ಆನಂದದಾಯಕ. ಕೋಮಲ ಪ್ರಕೃತಿಯ ಜಠರವೂ ಕೆಡುವುದಿಲ್ಲ. ಬೆಳವಣಿಗೆಯನ್ನು ವೃದ್ಧಿಗೊಳಿಸಿ ಎಲುಬು ಹಲ್ಲುಗಳನ್ನು ಸಬಲಪಡಿಸುತ್ತಿದೆ.

GOVERNMENT OIL FACTORY...
Calicut...

ಮದ್ರಾಸ್ ಆಧಿಪತ್ಯಕ್ಕೂ ಸಮೀಪದ ಸಂಸ್ಥಾನಗಳಿಗೂ ಏಜೆಂಟರು:
ಮೆ|| ಪೆರಿ ಎಂಡ್ ಕೊ, ಲಿಮಿಟೆಡ್ ಮದ್ರಾಸ್.

The Badavara Bandhu Group Enterprises

Editors. Printers, Publishers, Bankers, Merchants, Fish Dealers, Motion Picture Producers, Exhibitors, Benefactors. Property Dealers, Provision Dealers, etc., etc.

THROUGH

THEIR ASSOCIATED CONCERNS

1. The Badavara Bandhu.
2. The Badavara Bandhu Printing Press, Ltd.
3. Sri Narayana Guru Press.
4. Sri Narayana Guru Bank Ltd.
5. The South Kanara Fish Industries, Ltd.
6. The Karnataka Theatres, Ltd.
7. Janasons, Ltd.
8. The Badavara Bandhu Colonies.
9. The Badavara Bandhu Orphanage Trust.
10. My Stores.
11. The Vijaya Stores, Ltd.
12. The Badavara Bandhu Hosieries.
13. The West Coast Ice Factory,

Head Office:

MANGALORE, South India.

Telegraphic address:
1 BADAVARA BANDHU
2 MONEY
Post Box: No. 110

Pandit Bank, Mangalore

ಪಂಡಿತ್ ಬೇಂಕ್,

ಕೋರ್ಟ್ ರಸ್ತೆ, ಮಂಗಳೂರು.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡೆಸಲಾಗುವುವು. ಮುಖ್ಯವಾಗಿ ಚಿನ್ನಾಭರಣ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು

ಚಿನ್ನಾಭರಣ ಈಡಿನ ಮೇಲೆಹಣವನ್ನು ಕೊಡುವುದು ಈ ಬೇಂಕಿನ ವಿಶೇಷ ಗುಣ (Speciality) ಇದರಲ್ಲಿ ರಿಯಾಯ್ತಿಯೂ ವಿಶೇಷ–ಬಡ್ಡಿಯೂ ಬಹಳ ಸುಲಭ–ದಲ್ಲಿ ದೊಡ್ಡದಾದ ಹಾಗೆ ಬಡ್ಡಿ ಮತ್ತಷ್ಟು ಕಡಿಮೆ.

ಕಾಯಂ ಠೇವಣಾತಿಗಳು:

6 ತಿಂಗಳುಗಳಿಗೆ ಸೇ. 2%
1 ವರ್ಷಕ್ಕೆ ಸೇ. 2½%

ಚಾಲ್ತಿ ಠೇವಣಾತಿ:

ಪ್ರತಿದಿನದ ತಿಲ್ಕಿನ ಮೇಲೆ ಸೇ. ½%
ಸೇವಿಂಗ್ಸ್ ಬ್ಯಾಂಕ್: ಸೇ. 1½%

PANDIT SHIVA RAO, B.A., LL.B.
SOLE PROPRIETOR.
PANDIT DEVADAS RAO.
AGENT.

ಯೋಗ್ಯ ದರದಲ್ಲಿ ಉತ್ತಮ ದೇವಪೂಜಾ ಸಾಮಗ್ರಿ

ಆಪೇಕ್ಷಿಸುವವರು ಇಂದೇ ನಮ್ಮ ಪಾತ್ರೆಗೊಂದು ಪತ್ರ ಬರೆಯಿರಿ.

ಸಚಿತ್ರ ಕ್ಯಾಟಲಾಗ್ ಪುಕಟಾ ಕಳುಹಿಸಿಕೊಡುವೆವು. ಹಿತ್ತಾಳಿ ಉಪಕರಣಗಳು ಬೇಕಾದ ಸೈಜಿನಲ್ಲಿ ಖಾತ್ರಿಯಾಗಿ ಸದಾ ಸಿದ್ಧ ವಿರುವುವು. ಅಲ್ಲದೆ, ಉಡುಪಿಯಲ್ಲಿ ತಯಾರಾಗುವ ಬೆಳ್ಳಿ ಸಾಮಾನುಗಳನ್ನು ಶುದ್ಧ ಬೆಳ್ಳಿಯಿಂದ ತಯಾರಿಸಿ ಕಳುಹಿಸಬಲ್ಲೆವು. ಗಿರಾಕಿಗಳಿಗೆ ತುಂಬಾ ಅನುಕೂಲ ಹೆಚ್ಚಿನ ಮಾಹಿತಿ ಕ್ಯಾಟಲಾಗಿನೊಂದಿಗೆ.

ಕಲ್ಮಂಜೆ ವ್ಯಾಸಾಚಾರ್ಯ,
ಭ್ಯಾಂಡೆ ವ್ಯಾಪಾರಿ, ಉಡುಪಿ, ದ. ಕ.

Kalmanje Vyasacharya
Brass-ware Merchant,
UDIPI, S. I.

THE CANARA BANKING CORPORATION LIMITED.

ESTD: 1906.

(Incorporated in British India with limited liability.)

SEASON DEPOSITS.

for Rs. 10,000 and above are now accepted at all offices of the Corporation at the following rates

3—4 months 2¼% 6 months 2½%

These deposits will however not be accepted to run beyond 31—8—1946

With a net work of Branches and Agencies we offer the best of banking facilities.

XXVIII] ಮಂಗಳೂರು ತಾರೀಕು ೪—೬—೧೯೪೬ [೧೯
೧೮೬೪ ವ್ಯಯ ಸಂವತ್ಸರದ ಜ್ಯೇಷ್ಠ ಶು। ೫ ಮಂಗಳವಾರ

— ಮದ್ರಾಸ್ ರೈತರಿಗೆ ರಿಯಾಯಿತಿಗಳು —

—:o:—

ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಧಾನರಾದ ಶ್ರೀ. ಪ್ರಕಾಶಂ ಅವರು ಈ ಆಧಿಪತ್ಯದ ಅನ್ನ ಸ್ಯಾಮಗ್ರಿಗಳ ಕುರಿತಾದ ಒಂದು ದೀರ್ಘ ಹೇಳಿಕೆಯನ್ನು ಮಂಡಿಸಿದ ಬಳಿಕ ಚರ್ಚೆ ನಡೆದು ಹಲವು ಮೆಂಬರರ ಎಮರ್ಶೆಗಳಿಗೂ ಸೂಚನೆಗಳಿಗೂ ಪ್ರಧಾನರೂ ಉತ್ತರ ಹೇಳುವುದರೊಡನೆ ಈ ಆಧಿಪತ್ಯದಲ್ಲಿ ಮುಂದೆ ಅನ್ನ ಸಾಮಗ್ರಿಗಳನ್ನು ಬೆಳೆಯುವ, ಸಂಗ್ರಹಿಸುವ, ವಿತರಣೆ ಮಾಡುವ ವಿಧಾನಗಳು ಯಾವುದೆಂದೂ ಅವರು ವಿವರಿಸಿರುವರು

ಪ್ರಧಾನರ ವಿವರಣೆಯ ಮೇರೆಗೆ–ಎರಡು ದೊಡ್ಡ ರಿಯಾಯಿತಿಗಳನ್ನು ಪ್ರಕಟಿಸಲಾಗಿದೆ. ಜೂನ್ ಜುಲ್ಯಾಗಳಲ್ಲಿ ಧಾನ್ಯಗಳನ್ನು ಒಪ್ಪಿಸುವವರಿಗೆ ಮಣವೊಂದಕ್ಕೆ ಒಂದು ರೂಪಾಯಿ ಬೋನಸ್ಸನ್ನು ದೊರೆಯುವುದೊಂದು; ಸೆಪ್ಟೆಂಬರ್ ಅಕ್ಟೋಬರಗಳಲ್ಲಿ ಅಲ್ಪಾವಧಿಯ ಬೆಳೆ ಬೆಳೆದು ಅದನ್ನೊಪ್ಪಿಸುವವರಿಗೆ ಇನ್ನು ಬೇಗನೇ ತೀರ್ಮಾನವಾಗಲಿರುವ ದರದಂತೆ ಬೋನಸ್ಸನು ಕೊಡುವುದೊಂದು. ಇಷ್ಟೇ ಅಲ್ಲದೆ ಸ್ಟಾಕುಗಳನ್ನು ಗುಟ್ಟಿನಲ್ಲಿ ಕಳ್ಳತನದಿಂದ ಎಲ್ಲಿ ದಾಸ್ತಾನಿರಿಸಿರುವರೆಂದು ತಿಳಿಸುವವರಿಗೆ ಬಹುಮಾನ ಕೊಡುವ ಏರ್ಪಾಡೊಂದು ಬೇರೆಯೇ — ಇವು ಮೂರು ಶ್ಲಾಘ್ಯವಾದುವುಗಳೇ.

ಅಲ್ಲಲ್ಲಿನ ಆಹಾರ ಸಾಮಾಗ್ರಿಗಳ ಸಂಗ್ರಹ ಇತ್ಯಾದಿಗಳ ಸಂಬಂಧ ಏರ್ಪಡಲಿರುವ ಗ್ರಾಮು, ತಾಲೂಕು, ಜಿಲ್ಲಾ ಸಮಿತಿಗಳಿಂದ ತಕ್ಕಷ್ಟು ಒಳ್ಳೆಯ ಕೆಲಸವು ನಡೆಯಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ಈ ಸಮಿತಿಗಳಿಂದ ನಿಜವಾಗಿ ಆಗುವ ಕೆಲಸವೇನು, ಎಷ್ಟು, ಅದರಿಂದ ಆಗುವ ಉಪಕಾರವೇನು ಎಂಬುದನ್ನು ನೋಡಿಕೊಳ್ಳದೆ ಆ ಕುರಿತಾದ ಗುಣದೋಷಗಳನ್ನೇನೂ ಹೇಳಬರುವಂತಿಲ್ಲ. ಮುಖ್ಯವಾಗಿ ಸಮಿತಿಯ ಸದಸ್ಯರ ನ್ಯಾಯಬುದ್ಧಿ, ದೇಶಸೇವೆಯ ಸ್ಫೂರ್ತಿ ಇವುಗಳ ಮೇಲೆಯೇ ಈ ಏರ್ಪಾಡಿನ ಯಶಸ್ಸು ಹೊಂದಿಕೊಂಡಿದೆ. ಆ ಸದಸ್ಯರು ಕೆಲವಾದರೂ ಸ್ವಾರ್ಥಸಾಧಕರಾದರೆ ಉದ್ದೇಶವು ಭಂಗವಾದೀತು, ಒಳಸಂಚಿಗೆ ಅಸ್ಪದವಾದೀತು ಎಂಬುದು ನಿಜ ಆದುದರಿಂದ ಈ ಸಮಿತಿಗಳ ಮುಖ್ಯವಾಗಿ ಗ್ರಾಮು ಸಮಿತಿಗಳ ಆಯ್ಕೆಯಲ್ಲಿ ಬಹಳ ಜಾಗರೂಕತೆ ವಹಿಸಬೇಕಾದುದು ಆವಶ್ಯಕ.

ಈ ಸಂದರ್ಭದಲ್ಲಿ ಪ್ರತಿಯೊಬ್ಬ ಶಾಸನ ಸಭಾಸದಸ್ಯರು ಕೊಟ್ಟ ಸೂಚನೆಯನ್ನೂ ಪರಿಶೀಲಿಸಲಾಗುವುದೆಂದು ಪ್ರಧಾನರು ಆಶ್ವಾಸನ ಕೊಟ್ಟಿರುತ್ತಾರೆ. ಅಲ್ಪಾವಧಿಯ ಬೆಳೆ ಬೆಳೆಸುವಂತೆ ರೈತರಿಗೂ ಪ್ರೋತ್ಸಾಹ ದೊರಕಲಿದೆ. ಮೇಲಾಗಿ ದೀರ್ಘಾವಧಿಯ ಕೃಷಿಯ ಕಾರ್ಯನೀತಿಯೂ ಬೇಗನೇ ರೂಪಿಸಲ್ಪಡುವುದು. ಇವೆಲ್ಲ ಮುಂದಿನ ಮಾತು

ಇಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ನಮ್ಮ ರೈತರಲ್ಲಿ ಹೆಚ್ಚಿನವರು ಅವಿದ್ಯಾವಂತರು; ಅವರಿಗೆ ಆಗಾಗ ಅನ್ನ ಸಾಮಗ್ರಿಗಳ ಕುರಿತಾಗಿ ಆಗುವ ಏರ್ಪಾಡುಗಳು ಸುಲಭದಲ್ಲಿ ತಿಳಿಯುವ ಅವಕಾಶ ಎಲ್ಲ. ಆದ್ದರಿಂದ ಸರಕಾರದವರು ಆ ಏರ್ಪಾಡುಗಳೂ ಮಾರ್ಪಾಡುಗಳೂ ಕೂಡಲೇ ತಿಳಿದು ಬರುವಂತೆ ವ್ಯವಸ್ಥೆ ಮಾಡಬೇಕು. ಹೊಸ ಏರ್ಪಾಡುಗಳೇನೆಂದು ಕನ್ನಡದಲ್ಲಿ ಅಥವಾ ಇತರ ದೇಶ ಭಾಷೆಗಳಲ್ಲಿ ಚಿಕ್ಕ ವಿವರಗಳನ್ನು ಆಗಾಗ ಪ್ರಕಟಿಸಿ ಅವು ನೇರಾಗಿ ರೈತರ ಕೈಸೇರುವಂತಾಗಬೇಕು. ಬೆಳೆ ಬೆಳೆಯುವುದು ರೈತ, ಅದನ್ನು ತಂದು ಒಪ್ಪಿಸುವುದು ರೈತ —ಆದರೆ ಅವನ ಅದೃಷ್ಟವನ್ನು ರೂಪಿಸುವವರು ಅವನ ಸುಖದುಃಖಗಳನ್ನೇ ತಿಳಿಯದ ತಿಳಿದರೂ ಮುಂದೆ ತರಲೊಲ್ಲದ ಅಥವಾ ತಂದರೂ ಉಪಕಾರವಾಗದ ಇತರರಾದರೆ ರೈತನಿಗೆ ಬಂದ ಭಾಗ್ಯವೇನು? ಈ ಕಾರಣದಿಂದ ಸರಕಾರದವರು ಮಾಡಬಹುದಾದ ಎಲ್ಲ ಏರ್ಪಾಡುಗಳ ಸಂಪೂರ್ಣ ವಿವರವೂ ಅವನಿಗಿರುವಂತೆ, ಸರಕಾರವು, ಮೇಲೆ ಸೂಚಿಸಿದಂತೆ, ಚಿಕ್ಕ ವಿಷಯಗಳನ್ನು ಪ್ರಕಟಿಸಿ ಅವನ್ನು ರೈತರಲ್ಲಿ ಹಂಚುವುದೂ; ಗ್ರಾಮ ಸಮಿತಿಯ ಸದಸ್ಯರನ್ನಾರಿಸುವಲ್ಲಿ ರೈತ ವರ್ಗಕ್ಕೂ ಸರಿಯಾದ ಅವಕಾಶವನ್ನು—ಯಾರ ಯಾವ ನಿರ್ಬಂಧಕ್ಕೂ ಆ ವರ್ಗವು ಒಳಗಾಗದಂತೆ–ಕಲ್ಪಿಸುವುದೂ ಅಗತ್ಯವೆದೆ. ಇದನ್ನು ಸರಕಾರವು ಗಮನಿಸುವುದೇ?

ಮದ್ರಾಸ್ ಎಸೆಂಬ್ಲಿಯಲ್ಲಿ ಚರ್ಚೆ

ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಧಾನರು ಈ ಆಧಿಪತ್ಯದಲ್ಲಿ ಆಹಾರ ಸಾಮಗ್ರಿಗಳನ್ನು ಸಂಗ್ರಹಿಸುವ ಈಗಿನ ಕ್ರಮಗಳಲ್ಲಿ ಇರುವ ಕುಂದುಕೊರತೆಗಳನ್ನು ಪ್ರಸ್ತಾವಿಸಿ, ಸಹಕಾರಿ ಸಂಘಗಳೇ ಈ ಧಾನ್ಯಸಂಗ್ರಹ ವಿತರಣೆಯ ಕಾರ್ಯವನ್ನು ಎಲ್ಲ ಕಡೆಗಳಲ್ಲಿಯೂ ವಹಿಸಿಕೊಳ್ಳಲು ಮುಂದೆ ಬಂದರೆ ಅದೇ ಶ್ರೇಯಸ್ಕರವೆಂದು ಸೂಚಿಸಿ ಗೋಧಿಯ ಉಪಯೋಗವನ್ನು ಹೆಚ್ಚಿಸುವ ಅವಶ್ಯಕತೆಯನ್ನು ವಿವರಿಸಿದರು. ಭ್ರಷ್ಟಾಚಾರ, ಲಂಚಸಂಚಗಳು, ಕಳ್ಳಸಂತೆ— ಇವುಗಳ ಮೂಲೋತ್ಪಾಟನಕ್ಕೆ ಬೇಸಾಯಗಾರರ ಸಂಪೂರ್ಣ ಸಹಾಯ ಹೇಗೆ ಅಗತ್ಯವೆಂದು ನಿರೂಪಿಸಿ. ಅಧಿಕಾರಿಗಳಲ್ಲಿ ವಿಶ್ವಾಸ ತಿಸಿಕೊಂಡರು. ಅಧಿಕಾರಿಗಳೂ ಮಂತ್ರಿಗಳಾದ ತಾವೂ ಜನರ ಸೇವಕರಾಗಿಯೇ ಕೆಲಸ ಮಾಡಬೇಕೆಂದರು.

ಅನಂತರ ನಡೆದ ಚರ್ಚೆಯಲ್ಲಿ ಅನ್ನಸಮಿತಿಗಳ ಕೆಲವರಿಗೇ ಅಧಿಕಾರ ಕೊಡುವುದು ಅಪಾಯಕರವೆಂಬ ಸೂಚನೆ ಬಂತು. ಅನ್ನ ಶಾಖಾ ಸಚಿವರು ಬೇರೆ ಒಬ್ಬರು ಅಗತ್ಯವೆಂದು ಒಬ್ಬರೂ; ಗೋಧಿ ಉಪಯೋಗಕ್ಕೆ ಪ್ರಚಾರಕಾರ್ಯ ಆಗತ್ಯ; ರೈತರಿಗೆ ಸುಲಭದಲ್ಲಿ ಕೃಷ್ಯುಪಕರಣ, ಗೊಬ್ಬರ ಇತ್ಯಾದಿ ಒದಗಿಸುವುದು ಅಗತ್ಯವೆಂದು ಒಬ್ಬರೂ; ಅಧಿಕಾರ ವರ್ಗದ ವಿಳಂಬದ ಸೂಚನೆಯ "ರೆಡ್ ಟೇಪ್" ನಿರ್ಮೂಲವಾಗಬೇಕೆಂದು ಒಬ್ಬರೂ; ಕೃಷಿಯ ಉತ್ಪತ್ತಿಯನ್ನು ರಾಷ್ಟ್ರೀಯವಾಗಿಸಬೇಕು, ಅದನ್ನು ಕೇಂದ್ರೀಕರಿಸಬೇಕೆಂದು ಒಬ್ಬರೂ; ಸೂಚಿಸಲಾದ ಸಮಿತಿಗಳಲ್ಲಿ ಆಢ್ಯರಾದ ವರ್ಗದವರಿದ್ದರೆ ತೊಂದರೆ; ದಾಸ್ತಾನಿಡುವ ಕೆಲಸವು. ಈ ಸಮಿತಿಗಳಿಂದ ಪ್ರೋತ್ಸಾಹಿಸಲ್ಪಡಬಹುದೆಂದು ಒಬ್ಬರೂ; ಬಟಾಟೆ ಜನಪ್ರಿಯವಾಗಬೇಕೆಂದು ಒಬ್ಬರೂ; ಧಾನ್ಯದ ಬೆಲೆಯನ್ನು ಪುನರ್ ಎಮರ್ಶಿಸಿ ಎಂದು ಒಬ್ಬರೂ; ರೈತನ ಬಾವಿ ಕೃಷಿ ಇತ್ಯಾದಿಗಳಿಗಾಗಿ ಸರಕಾರ ಕೊಡುವ ಸಹಾಯದ್ರವ್ಯ ರೈತನಿಗೆ ಸರಾ ಕೈ ಸೇರದೆ ಮಧ್ಯದಲ್ಲಿ "ಮಾಮೂಲಿಗಾಗಿ" ಮಾಯವಾಗುತ್ತಿದೆ ಎಂದು ಒಬ್ಬರೂ; ಲಂಚಸಂಚಗಳೇ ಮೊದಲಾದ ಅನಿಷ್ಟಾಚಾರಗಳನ್ನು ನಿಲ್ಲಿಸಿರೆಂದು ಒಬ್ಬರೂ; "ರೇಶನಿಗೆ" ಬಹು ಕಟ್ಟ ಅಕ್ಕಿ ಕೊಡುವ ನಿದರ್ಶನಗಳನ್ನೆತ್ತಿ ಒಬ್ಬರೂ; ರೈತರಿಗೆ ಕೊಡಬೇಕಾದ ಸರಕಾರದ ಸಹಾಯದ ಕುರಿತು ಒಬ್ಬರೂ; ಗ್ರಾಮದ ಶ್ಯಾನುಭಾಗರ ಮೇಲೆ ಚೆನ್ನಾಗಿ ಹತೋಟಿ ಇಡಿ ಎಂದು ಒಬ್ಬರೂ; (ನಮ್ಮ ಜಿಲ್ಲೆಯ ಎಮ್. ಎಂ. ಎಂ. ಶಮ್ಮಾಡರು) ಧಾನ್ಯಗಳ ಬೆಲೆ ಏರಿಸಬಾರದೆಂದು ಒಬ್ಬರೂ; "ಪ್ರೊಕ್ಯೂರ್‌ಮೆಂಟ್" ಸಿಬಂದಿ ಯಂತ್ರವನ್ನು ಬದಲಾಯಿಸಬೇಕಿಲ್ಲವೆಂದು ಒಬ್ಬರೂ; (ನಮ್ಮ ಜಿಲ್ಲೆಯ ಎಮ್. ಎಚ್. ಎಸ್. ಹುಸೇನ್ ಅವರು) ಕಾಯಿಪಲ್ಯದ ಹೊಲಗಳನ್ನೆರ್ಪಡಿಸಿ ಎಂದು ಒಬ್ಬರೂ;—ಹೀಗೆ ಹಲವರು ಸದಸ್ಯರು ಹಲವು ಸೂಚನೆಗಳನ್ನು ಕೊಟ್ಟರು; ಚರ್ಚಿಸಿದರು ಪ್ರಧಾನರ ಭಾಷಣದ ಬಳಿಕ ಆಹಾರಸಾಮಗ್ರಿಗಳ ಕುರಿತಾದ ಸರಕಾರದ ಯೋಜನೆ ಮಂಜೂರಾಯಿತು.

—

ಮಂಗಳೂರು

ಹಿಂದೀ ರಾಷ್ಟ್ರೀಯ ಕೆಥೊಲಿಕ್ ಯುವಜನ ಕಾಂಗ್ರೆಸಿನ ದಳ

ಮಂಗಳೂರಿನ ಕೆಥೊಲಿಕ್ ಯುವಕರ ದೊಂದು ಸಭೆ ಕಳೆದ ತಾ. ೩೦ರಲ್ಲಿ ಎಲಾಗ್ರೀಸ್ ಹೈಸ್ಕೂಲಲ್ಲಿ ಎಂ. ಎಚ್. ಜೆ. ಫೆರ್ನಾಂಡೀಸ್ ಅವರ ಅಧ್ಯಕ್ಷತೆಯಲ್ಲಿ ಜರುಗಿತು. "ಯುವಕ ಚಳವಳದ" ಕುರಿತು ಡಾ. ಜಿ. ಎಲ್. ಸಾಲ್ದಾನರೂ; "ಬೊಂಬಯಿಯಲ್ಲಿ ಯುವಕ ಚಳವಳ"ದ ಕುರಿತು, (ಬೊಂಬಯ್ಯಿಯ) ಎಂ. ಎಲಿಯಂ ಲೋಬರೂ, "ಮಹಿಳೆಯರ ಕಾರ್ಯ ಭಾಗ"ದ ಕುರಿತು ಎಸ್. ದುಲ್ಸಿನ್ ನಜರೇತ್‌ರೂ, "ಧರ್ಮ ಮತ್ತು ಯುವಜನ ಚಳವಳ"ದ ಕುರಿತು ಎಂ. ಸಿರಿಲ್ ಡಿ'ಸೋಜರೂ ಮಾತಾಡುವುದರೊಡನೆ ಡಾ. ಸಂಜೀವನಾಥ ಶೆಟ್ಟಿಯವರೂ ಭಾಷಣ ಮಾಡಿದರು. ಶಿರ್ವದ ಹುಡುಗಿಯರ ಸೆಕೆಂಡರಿ ಶಾಲೆಯನ್ನು ಕೆಥೊಲಿಕ್ ಮಕ್ಕಳಿಗಾಗಿರುವ "ಎಕ್ಸೆಡ್" ಶಾಲೆಯೆಂದು ಅಂಗೀಕರಿಸಬೇಕಾಗಿ ಶಿರ್ವದ ಕೆಥೊಲಿಕರೂ ಗುರುಗಳೂ ಸರಕಾರಕ್ಕೊಪ್ಪಿಸಿದ ಅ ಮೆಮೊರಿಯಲನ್ನು ಸಮರ್ಥಿಸಿ ಠರಾವಾಯಿತು. ಅಧ್ಯಕ್ಷರ ಭಾಷಣವಾಗಿ ಮೇಲ್ಕಂಡ ಕಾಂಗ್ರೆಸಿನ ಒಂದು ದಳದ ಸ್ಥಾಪನೆಯಾಯಿತು. ದಳದ ಸದಸ್ಯರಿವರು:–ಎಂ।ಗಳಾದ ಸಿರಿಲ್ ಡಿ'ಸೋಜ, ಎಚ್. ಜೆ. ಫೆರ್ನಾಂದಿಸ್, ಚಾರ್ಲ್ಸ್ ಸಿಕೇರಿ, ಎಫ್. ಫೆರ್ನಾಂದಿಸ್, ಎಸ್. ಎಸ್. ಮಿರಾಂದಾ, ಎಸ್. ಎಸ್. ರಸ್ಕಿಂಜ, ಎಂ ಪಿ. ಡೀಸಾ, ಗಿಲ್ಬರ್ಟ್ ಪ್ಯಾಸ್, ಡಾ. ಜಿ. ಎಲ್. ಸಾಲ್ದಾನಾ.

ಈ ದಳದ ರಚನೆಯ ಕಾರಣವು ಹೀಗಿದೆ:–ಇದೇ ಇಸ್ವಿ ಎಪ್ರಿಲ್ ತಾ. ೨೭–೨೮ರಲ್ಲಿ ಬೊಂಬಯಿಯಲ್ಲಿ ಭಾರತದ ಕೆಥೊಲಿಕ್ ಯುವಕರ ರಾಷ್ಟ್ರೀಯ ಸಮ್ಮೇಳನವು ಎ. ಜೆ. ವಾರ್ಕಿ (ಮದ್ರಾಸ್ ಮಾಜಿ ಮಂತ್ರಿ)ಯವರ ಅಧ್ಯಕ್ಷತೆಯಲ್ಲಿ ಜರುಗಿತು. ಬೊಂಬಯಿ ಪ್ರಧಾನ ಶ್ರೀ. ಬಿ. ಜೆ. ಖೇರರು ಅದರ ಆರಂಭೋತ್ಸವ ನೆರವೇರಿಸಿದ್ದರು. ಆಗ "ಕೆಥೊಲಿಕರು ಪ್ರತಿಯೊಂದು ವಿಚಾರದಲ್ಲಿ ತಮ್ಮ ಜೀವನ, ಆಚಾರಾದಿಗಳನ್ನು ಹಿಂದೀ ರಾಷ್ಟ್ರೀಯತ್ವಕ್ಕೆ ಒಪ್ಪುವಂತೆ ಹೊಂದಿಸಿಕೊಳ್ಳಬೇಕೆಂಬ" ಒಂದು ಠರಾವೂ; "ದೇಶದ ಎಲ್ಲ ಭಾಗಗಳಲ್ಲಿಯೂ ತಾತ್ಕಾಲಿಕ ವ್ಯವಸ್ಥಾ ಸಮಿತಿ ಈ ದಳಗಳನ್ನೇರ್ಪಡಿಸಬೇಕೆಂದು"ಇನ್ನೊಂದು ಠರಾವೂ ಡಾ, ಜಿ. ಎಲ್. ಸಾಲ್ದಾನರವರಿಂದ ಮುಂತರಲ್ಪಟ್ಟು ಮಂಜೂರಾದಂತೆ ಡಾ. ಸಾಲ್ದಾನರೇ ಈ ಸಭೆ ಕರೆದಿದ್ದರು.

ವೀನಸ್ ರೋವರ್ ಸ್ಕೌಟುಗಳ ಪ್ರವಾಸ

ಮಂಗಳೂರಿನ ಮೇಲ್ಕಂಡ ಸ್ಕೌಟ್ ದಳದವರು ತಮ್ಮ ನಾಯಕ ಶ್ರೀ. ಬಿ. ಪರಿಶ್ಚಂದ್ರ ಆಚಾರ್ ಇವರೊಡನೆ ಹೊರಟು ಕಳೆದ ವೇ. ತಾ. ೧೦ರಿಂದ ೨೭ರವರೆಗೆ ಬಂಗ್ರಮಂಜೇಶ್ವರ, ಕುಂಬಳೆ, ಪೆರ್ಡಾಲ, ಪೆರ್ಲ, ಎಟ್ಲ, ಪುತ್ತೂರು ಮೊದಲಾದ ಕಡೆ ಸಂದರ್ಶಿಸಿ ಎಎಫ್ ಏನೋ ದಾವಳಿಗಳನ್ನೂ ಪ್ರದರ್ಶಿಸಿದರು. ದಳದವರಲ್ಲಿ ಕೆಲವರ, ಇತರರ ಭಾಷಣಗಳೂ ಇದ್ದುವು. ಪೆರ್ಡಾಲಿನಲ್ಲಿ ಡಾ. ಸುಬ್ರಹ್ಮಣ್ಯ ಶಾಸ್ತ್ರಿಗಳ, ಪೆರ್ಲದಲ್ಲಿ ಶಾಲಾ ಮೆನೆಜರ್ ಶ್ರೀ. ಪರ್ತಾಜೆ ವೆಂಕಟರಮಣ ಭಟ್ಟರ, ಎಟ್ಲದಲ್ಲಿ ಶ್ರೀ. ಪಿ. ನಾರಾಯಣ ಸೆಟ್ಟರೇ ಮೊದಲಾದವರ ಆತಿಥ್ಯ ಸ್ವೀಕರಿಸಿದರು.

ಪ್ರಕಾಶ ಕೂಟ

ಈ ಕೂಟದ ಕಾರ್ಯಕಾರಿ ಮಂಡಲದ ಸಭೆ ಇದೇ ಜೂನ್ ತಾ. ೯ನೇ ರವಿವಾರ ಬೆಳಿಗ್ಗೆ ೧೦ ಗಂಟೆಗೆ ರಘುನಾಥಯ್ಯ ಮೆಮೊರಿಯಲ್ ಹಾಲಿನಲ್ಲಿ ಜರಗುವುದೆಂದು ಕಾರ್ಯದರ್ಶಿ ಶ್ರೀ ಬಿ. ಗೋಪಾಲಕೃಷ್ಣ ಅವರು ತಿಳಿಸುತ್ತಾರೆ.

ಉಪಾಧ್ಯಾಯ ಸಂಘದ ಸಭೆ

ಕಳೆದ ತಾ. ೧೯ನೇ ಶನಿವಾರ ಉರುವ ಸೈಂಟ್ ಎಲೋಸಿಯಸ್ ಶಾಲೆಯಲ್ಲಿ ಉರುವ ಸೆಂಟರಿನ ಉಪಾಧ್ಯಾಯ ಸಂಘದ ವಾರ್ಷಿಕೋತ್ಸವ ಶ್ರೀ. ಎಚ್. ಸಂಜೀವ ರಾವ್ (ಟ್ರೈನಿಂಗ್ ಶಾಲೆ) ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಸದಸ್ಯರೂ ಎಎ. ಸಿಕೇರ,ವನಜ ಎಂಬ ಬಾಲಕಿಯರೂ ಎನೋದಾವಳಿಗಳಿಂದ ಸಭೆಯನ್ನು ಆನಂದಗೊಳಿಸಿದ ಬಳಿಕ ಅಧ್ಯಕ್ಷ ಭಾಷಣ ವಂದನಾರ್ಪಣೆಗಳು ನಡೆದುವು.

ರೇಶನಿಂಗ್ ಆಫೀಸರರ ಪ್ರಕಟಣೆ

ಮದುವೆ ಹೊರತು ಇತರ ಯಾವ ಕೂಟದಲ್ಲೂ ಆಮಂತ್ರಣ ಕೊಟ್ಟವರು ಸೇರಿ, ೩೦ ಜನರಿಗಿಂತ ಹೆಚ್ಚಿನವರಿಗೆ ಆಹಾರ (ಪಾನೀಯ ಎನಹ) ಒದಗಿಸುವ ಆತಂಕವು ಇತ್ತು. ಮದುವೆ ಕೂಟದಲ್ಲಿ ಆಹಾರವನ್ನು ಕೊಡತಕ್ಕ ಸಂಖ್ಯೆಯು ೫೦ಕ್ಕೆ ಏರಬಾರದೆಂಬದಾಗಿ ಸರಕಾರವು ನಿಶ್ಚಯಿಸಿರುತ್ತದೆ. ಹೀಗೆ ೫೦ ಜನರ ಲೆಕ್ಕು ತೆಗೆಯುವಾಗ ವಧೂವರರು ಮತ್ತು ಅವರ ಕುಟುಂಬದವರಾದ ಕಾಯಂ ಯಾಹಂಗಾಮಿ ರೇಶನ್ ಕಾರ್ಡುಗಳನ್ನು ಪಡೆದು, ಅಕ್ಕಿಯನ್ನು ಉಪಯೋಗಿಸುವರೆ ಅನುಮತಿ ಪಡೆದವರನ್ನು ಎರಹಿತಪಡಿಸಬೇಕು. ಮದುವೆ ಜರಗುವ ಸರಹದ್ದಿನ ಹೊರತು ಇನ್ನಿತರ ಸರಹದ್ದಿನಿಂದ ಬಂದ ವಧೂವರರ ಬಂಧುಗಳಿಗೆ ಮಾತ್ರ ಹಂಗಾಮಿ ಕಾರ್ಡು ರೇಶನ್ ಆಫೀಸರರು ಕೊಡುವರು. ಮೂರು ದಿವಸಗಳಿಗೆ ಕಡಿಮೆ ನಿಲ್ಲುವ ಅಥವಾ ಮೂರು ದಿವಸಗಳಿಗೆ ಎಂರಿ ಇದ್ದು ಹಂಗಾಮಿ ಕಾರ್ಡು ಪಡೆಯದೆ ಇರುವ ಕುಟುಂಬದವರು ಈ ೫೦ ಜನ ಸಂಖ್ಯೆಯ ಲೆಕ್ಕುಕ್ಕೆ ಒಳಗಾಗುವರು.

ಈ ಹುಕುಂ ಮದುವೆಯ ಪಾರ್ಟಿಯಲ್ಲಿ ಬರೇ ಪಾನೀಯ ಮಾತ್ರ ಕೊಡುವುದಕ್ಕೆ ಲಗಾವಾಗುವುದಿಲ್ಲ.

ರೇಶನಿಂಗ್ ಆಫೀಸರ್, ಮಂಗಳೂರು.
ಸೆಂಟ್ರಲ್ ರೇಶನಿಂಗ್ ಆಫೀಸು,
ಮಂಗಳೂರು, ತಾ. ೩೧–೫–೪೬.

——

ತುಳುನಾಟಕ—ಅಮ್ಮುಂಜೆ

ಅಮ್ಮುಣಿಂಜೆ ಎಯಿಡೆಡ್ ಎಲಿಮೆಂಟರಿ ಶಾಲಾ ಹಳೆ ವಿದ್ಯಾರ್ಥಿಗಳ ಕೂಡುವಿಕೆಯಿಂದ ಕಳೆದ ತಾ. ೨೪ರಲ್ಲಿ ಉಡುಪಿ ಕ್ರಿಶ್ಚನ್ ಹೈಸ್ಕೂಲಿನ ಸಹಾಯಕ ಅಧ್ಯಾಪಕರಾದ ಶ್ರೀ ಎ. ರಾಮಣ್ಣ ಸೆಟ್ಟಿ ಬಿ. ಎ. ಎಲ್. ಟಿಯವರ ಅಧ್ಯಕ್ಷತೆಯಲ್ಲಿ "ಎದ್ದೆದ ತಾದಿ" ಎಂಬ ತುಳು ನಾಟಕವನ್ನು ಅಭಿನಯಿಸಿದ ಬಳಿಕ, ಅಧ್ಯಕ್ಷರು ಶಾಲಾ ಏಳಿಗೆಗಾಗಿ ರಕ್ಷಕರ ಹೊಣೆಗಾರಿಕೆಯ ಕುರಿತು ಕನ್ನಡ ಭಾಷೆಯಲ್ಲಿ ಸುರಸವಾದ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯರು ವಂದಿಸಿದರು ರಾಷ್ಟ್ರಗೀತೆಯೊಡನೆ ಸಭೆಯು ಅಗಲಿತು.

——

Wanted

Applications are invited by the undersigned from candidates possessing the following qualifications for the post of a Paid Secretary.

1. The Degree of B. A. or B. Com. of any of the Recognised Universities.

2. A course of training successfully undergone in any one of the Co-operative Training Institutes.

3. A pass in the Government Technical Examination in Book-keeping, Banking, Co-operation and Auditing or the examination in these subjects held by the Central Co-operative Institute, Madras.

The selected candidate must be prepared to furnish a Cash Security of Rs. 5000/—. The remuneration will be in the scale of Rs. 100—5—150. The intending candidates should apply by the 15th June '46.

S/d. S. NARSAPAYA,
Hon. Secretary.

The Mangalore Co-opt. Stores.
Office of Mangalore Co-opt.
Stores Ltd., Mangalore.
D/ 29—5—1946.

ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕೂಟ, ಉಡುಪಿ

ಮೊದಲನೆಯ ಸಮ್ಮೇಳನ

ಈ ಮಕ್ಕಳ ಕೂಟದ ಮೊದಲನೆಯ ಸಮ್ಮೇಳನವು ಇದೇ ತಾ. ೨೭, ೨೮, ೨೯ರಲ್ಲಿ ಮೈಡನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಯಶಸ್ವಿಯಾಗಿ ಜರುಗಿತು.

ತಾ. ೨೭ ಸೋಮವಾರದಂದು ಬೆಳಿಗ್ಗೆ ಶ್ರೀಮತಿ ಯು. ರಾಧಾಬಾಯಿಯವರಿಂದ ರಾಷ್ಟ್ರ ಧ್ವಜಾರೋಹಣವು ನೆರವೇರಿದ ಬಳಿಕ ಪ್ರಭಾತಫೇರಿ ಧ್ವಜವಂದನೆಗಳು ಜರಗಿದುವು. ೯ ಗಂಟೆಗೆ ಲೇಖನ ಸ್ಪರ್ಧೆಯು ಆರಂಭವಾಗಿ ೭ ಜನ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿದರು.

ಮಧ್ಯಾಹ್ನ ೩॥ ಗಂಟೆಗೆ ಸಭಾ ಭವನವು ಹಿರಿಯರು, ಹೆತ್ತವರು ಮಕ್ಕಳಿಂದ ಕಿಕ್ಕಿರಿದು ತುಂಬಿರಲು, ಕೂಟದ ಅಧ್ಯಕ್ಷ ಶ್ರೀ. ಬಿ. ಅಂತಯ್ಯ ಶೆಟ್ಟರು ಕರ್ಣಾಟಕ ಸಂಘದ ಅಧ್ಯಕ್ಷರೂ ಹಿರಿಯ ಸಾಹಿತಿಗಳೂ ಆದ ಶ್ರೀ. ಎನ್. ರಾಜಗೋಪಾಲ ಕೃಷ್ಣರಾಯರನ್ನು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಸಲಾಗಿ ಶ್ರೀ. ಸುರೇಶನು ಸ್ವಾಗತ ಗೀತೆಯನ್ನು ಹಾಡಿದನು, ಶ್ರೀ. ನರಸಿಂಹ ಪಾಂಗಣ್ಣಾಯನು ಸ್ವಾಗತ ಭಾಷಣವನ್ನು ಮಾಡಿದನು. ಮೈಸೂರ ಅಖಿಲ ಕರ್ಣಾಟಕ ಮಕ್ಕಳ ಕೂಟದ ಅಧ್ಯಕ್ಷೆ ಶ್ರೀಮತಿ ಕಲ್ಯಾಣಮ್ಮನ ಸಂದೇಶವು ಓದಲ್ಪಟ್ಟಿತು. ಶ್ರೀ ಬಿ. ರಾಮಕೃಷ್ಣಾಚಾರ್ಯ ಬಿ. ಎ. ಎದ್ವಾನ್ ಇವರು ದೀರ್ಘ ಭಾಷಣದಲ್ಲಿ ಮಕ್ಕಳ ಬೆಳವಣಿಗೆ, ಶೀಲ, ವಿನಯ, ವ್ಯಾಯಾಮದ ಆವಶ್ಯಕತೆ, ಸಮ್ಮೇಳನದ ಉಪಯೋಗ ಮುಂತಾದ ಸಮಯೋಚಿತ ವಿಷಯಗಳನ್ನು ಒತ್ತಿ ಹೇಳಿದರು. ವಿದ್ವಾನ್ ಶ್ರೀ. ಕುಪ್ಪಣ್ಣಾಚಾರ್ಯರು ಮಕ್ಕಳ ಚಟುವಟಿಕೆ ತರಬೇತು, ಅವರ ವಿಳಿಗೆಯ ಮಾರ್ಗ ಮುಂತಾದ ಮುಖ್ಯ ವಿಷಯದ ಕುರಿತು ಸುದೀರ್ಘ ಭಾಷಣ ಮಾಡಿದರು.



ಬೋಂಬೆ ಕೊ-ಒಪರೇಟಿವ್ ಇನ್ಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್, ಬೋಂಬೆ.

ವಿಮಾಕಾರ್ಯಗಳ ವಿಶೇಷ ಯೋಜನೆಗಳು ಪ್ರತ್ಯೇಕವಾಗಿ ಗ್ರಾಮಾಂತರ ಶಾಖೆಯ ಪಾಲಿಸಿಗಳು

ನಿಮ್ಮ ಜೀವವಿಮೆಗಾಗಿ ಅಥವಾ ಪ್ರತಿನಿಧ್ಯಕ್ಕಾಗಿ ಯಾವಾಗಲೂ ಇವರೊಡನೆ ಆಲೋಚಿಸಿರಿ,

"ಬೋಂಬೆ ಕೊ-ಒಪರೇಟಿವ್"

ದಿ ನ್ಯೂ ಇಂಡಿಯಾ ಕೊ., ಲಿಮಿಟೆಡ್,
ಚೀಫ್ ಏಜಂಟರು,
44, ಲಜ್ ಚರ್ಚ್ ರೋಡ್ಸ್, ಮೈಲಾಪುರ
ಮದ್ರಾಸು.

ಎಂ. ಟಿ. ಕೊರ್ಡೇಲ್,
ಸುಪರಿಂಟೆಂಡೆಂಟ್ ಒಫ್ ಏಜನ್ಸೀಸ್,
ಹಂಪನಕಟ್ಟಾ, ಮಂಗಳೂರು.

ಶಾಂತರಾಮನು ಹಿಮ್ಮೇಳವಿಲ್ಲದೆ ಚಿಕ್ಕ ಹಾಡುಗಳನ್ನು ಶ್ರಾವ್ಯವಾಗಿ ಹಾಡಿದನು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮಕ್ಕಳ ಭವಿಷ್ಯ, ಪಾಶ್ಚಾತ್ಯ ವಿದ್ಯೆಯ ದುಷ್ಪರಿಣಾಮ, ನಮಗೆ ಯೋಗ್ಯವಾದ ಶಿಕ್ಷಣದ ಅವಶ್ಯಕತೆ, ಸ್ವತಂತ್ರ ಜೀವನಕ್ಕಾಗಿ ಯೋಗ್ಯ ಶಿಕ್ಷಣವನ್ನು ಆರಿಸಿಕೊಳ್ಳುವುದು, ಹೆತ್ತವರ ಸಹಕಾರ, ಸಂಘ ಶಕ್ತಿ, ಹುರುಪು ಮುಂತಾದ ವಿಷಯಗಳ ಕುರಿತು ಬೋಧಪರ ಭಾಷಣವಿತ್ತರು.

ಶ್ರೀ. ಹರಿದಾಸ ಬಲ್ಲಾಳರು ಬೇಂದ್ರೆಯವರ ಕವಿತೆಯ ವಾಚನವನ್ನು ಶ್ರಾವ್ಯವಾಗಿ ಮಾಡಿದರು. ವಿವಿಧ ವಿನೋದವಳಿಯು ಮುಗಿದೊಡನೆ ಶ್ರೀ. ಬಿ. ಅಂತಯ್ಯ ಶೆಟ್ಟರು ಧನ್ಯವಾದವನ್ನು ಅರ್ಪಿಸಿದರು.

(ಮುಂದಿನ ಸಂಚಿಕೆಯಲ್ಲಿ ಮುಗಿಯುವುದು.)

——

ನಿಮ್ಮ ಮಗುವಿನ ಜೀರ್ಣ ಶಕ್ತಿಯು

ಕುಂದಿದಾಗ

ಜಾಗರೂಕರಾಗಿರಿ. ಮಗುವಿನ ಕಲಿಜಕ್ಕೆ ಹಾನಿಯುಂಟಾಗಿರಬಹುದು. ಪ್ರಾಯಶಃ ಕಲಿಜದ ಅತಿಶಯ ಬೆಳವಣಿಗೆಯಿರಬಹುದು.

ಈ ಚಿಹ್ನೆಗಳನ್ನು ಸಕಾಲದಲ್ಲಿ ಗೊತ್ತುಹಚ್ಚಿರಿ. ಆಗಾಗ್ಗೆ ಜ್ವರವು ಬರೋಣ, ಅಜೀರ್ಣತೆ, ಮಲಬದ್ಧತೆ, ವಾಂತಿ, ನಾಲಿಗೆಯ ರುಚಿ ಕೆರೆದಿರುವಿಕೆ. ಉದರದ ಉಬ್ಬುವಿಕೆ. ದೇಹದ ಉಲ್ಲಾಸ ಮತ್ತು ಉತ್ಸಾಹವು ಕಡಿಮೆಯಾಗೋಣ.

ತತ್ಕಾಲಿಕ ದಕ್ಷತೆಯಿಂದ ಪಾರಾಗಬಹುದು.

ಪ್ರಥಮ ಚಿಹ್ನೆಯು ನಿಮ್ಮ ಗಮನಕ್ಕೆ ಬಂದೊಡನೆ "ಜಮ್ಮಿ"ಯವರ "ಲಿವರ್ ಕ್ಯೂರ್"ನ್ನು ಕೊಡಿರಿ. ಇದು ನಿಮ್ಮ ಕಳವಳವನ್ನು ಹೋಗಲಾಡಿಸಿ, ತೊಂದರೆಯನ್ನೂ ಹಣವ್ಯವನ್ನೂ ಕಡಿಮೆಮಾಡಿ ರೋಗವು ಮುಂದರಿಯದಂತೆ ತಡೆಗಟ್ಟುತ್ತದೆ.

"ಜಮ್ಮಿ"ಯವರ
ಲಿವರ್ ಕ್ಯೂರ್

ಮಕ್ಕಳ ಖಲಿಜ ಮತ್ತು ಸ್ಪ್ಲೀಹ ರೋಗಗಳಿಗೆ ಎಲ್ಲಾ ಕಡೆಗಳಲ್ಲೂ ಮಾರಲ್ಪಡುತ್ತದೆ

ಇತರ ವಿವರಗಳಿಗಾಗಿ :-
ಜಮ್ಮಿ ವೆಂಕಟ್ರಮಣಯ್ಯ ಎಂಡ್ ಸನ್ಸ್
ಲಿವರ್ ಕ್ಯೂರ್ ಆಫೀಸ್ ಮತ್ತು ಕ್ಲಿನಿಕ್
ಮೈಲಾಪುರ ಮದ್ರಾಸು ಅಥವಾ ಬಿಗ್ ಸ್ಟ್ರೀಟ್
ಕುಂಭಕೋಣಮ್ ಅಥವಾ ಟಿಪ್ಪಾಕುಲಮ್ ತ್ರಿಚಿನಾಪೋಲಿ ಅಥವಾ ಆರ್ಕೋಟ್ ಶ್ರೀನಿವಾಸಾಚಾರಿ ಸ್ಟ್ರೀಟ್, ಬೆಂಗಳೂರು ಸಿಟಿ

(ಹಿನೇ ಪುಟದಿಂದ)

ಳನ್ನೂ ಎಮಾನ ಪಡೆಗಳನ್ನೂ ಬೇಗ ಬೇಗನೇ ಬಲಪಡಿಸುತ್ತಿದ್ದಾರೆ. ರಷ್ಯದೊಳಗಾಗಲಿ ರಶ್ಯದ ಸ್ವಾಧೀನವಿರುವ ಪೂರ್ವ ಜರ್ಮನಿ, ಪೂರ್ವ ಯುರೋಪುಗಳಲ್ಲಾಗಲಿ ಏನು ನಡಿಯುತ್ತಿದೆ ಎಂದು ಯಾರಿಗೂ ತಿಳಿಯ ಸಾಧ್ಯವಿಲ್ಲ. ಆಂಗ್ಲ ಅಮೆರಿಕಗಳ ಚಟುವಟಿಕೆಗಳೆಲ್ಲಾ ಸ್ಟೆಲಿನ್ನನಿಗೆ ತಿಳಿದಿದೆ; ಅಮೇರಿಕವು ಮಾನವ ಸಂಹಾರಕ್ಕೆಂದು ತಯಾರಿಸಿರುವ ಹೊಸ ಹಾಲಾಹಲದ ವಾರ್ತೆಯು ಸ್ಟೇಲಿನನ ಕಿವಿಗೂ ಮುಟ್ಟಿರುತ್ತದೆ. ಆಂಗ್ಲ ಅಮೇರಿಕಗಳು ಜರ್ಮನ್ ಜಪಾನಿಯರನ್ನೀಗ ನೋಯಿಸುವುದನ್ನು ಬಿಟ್ಟು ಮೂರನೇ ಮಹಾ ಯುದ್ಧದಲ್ಲಿ ತಮಗೆ ಅವರು ಸಹಾಯಕರಾಗುವಂತೆ ಅಣಿಪಡಿಸುವುದೂ ಸ್ಟೇಲಿನನು ತಿಳಿದಿರುತ್ತಾನೆ. ಆದರೆ ಸ್ಟೇಲಿನ್ನನಲ್ಲಿ ಆಂಗ್ಲ, ಅಮೇರಿಕಗಳ ಭೀತಿಯೇನೂ ತೋರುವುದಿಲ್ಲ. ಭೂಲೋಕವನ್ನು ತಲ್ಲಣಗೊಳಿಸುವ ಹೊಸ ಬಾಂಬು, ಹೊಸ ಎಷ್ಟಗಾಳಿ, ಹೊಸ ಉಪಕರಣಗಳೆಲ್ಲಾ ಸ್ಟೇಲಿನ್ನನ ವಶ ಎಷ್ಟಿವೆಯೆಂದು ಹೇಳ ಸಾಧ್ಯ ಎಲ್ಲ ಸ್ಟೇಲಿನ್ನನೂ ಸಿದ್ಧತೆಯಲ್ಲೇ ಇದ್ದಾನೆ. ಉಭಯ ಪಕ್ಷಗಳ ಧೋರಣೆ, ಧ್ಯೇಯ, ಕಾರ್ಯಕ್ರಮಗಳಲ್ಲಿ ಯಾವ ಸಂಬಂಧವೂ ಇರುವುದಿಲ್ಲ. ಪರಸ್ಪರ ಹೊಂದಾಟಗಳಿಂದಲೇ ಧ್ಯೇಯಗಳ ಪರೀಕ್ಷೆಯಾಗಬೇಕಾಗಿದೆ.

ಹೀಗೆ ಆಂಗ್ಲ ಅಮೇರಿಕಗಳಿಗೆ ಸಾಮ್ರಾಜ್ಯದ ಚಿಂತೆ, —ರಶ್ಯಕ್ಕೆ ತನ್ನ ಭದ್ರತೆಯ ಚಿಂತೆ, —ಜರ್ಮನಿ ಜಪಾನುಗಳಿಗೆ ಸ್ವಾಭಿಮಾನವನ್ನುಳಿಸಿಕೊಂಡು ಬಾಳುವ ಚಿಂತೆ, —ಚೀನ ಇರಾಣಗಳಲ್ಲಿ ಅಂತರ್ಯುದ್ಧದ ಚಿಂತೆ, —ಇಂಡೋನೇಸ್ಯದಲ್ಲಿ ಸ್ವಾತಂತ್ರ್ಯದ ಚಿಂತೆ; ಭೂಲೋಕವಿಡೀ ಚಿಂತಾಮಯವಾಗಿದೆ. ಭೂಲೋಕದ ಎಲ್ಲಾ ಭಾಗಗಳಲ್ಲಿಯೂ ಜನರಲ್ಲೀಗ ಶಾಂತಿ, ವಿಶ್ರಾಂತಿ ತೃಪ್ತಿಗಳು ಇಲ್ಲದಂತಾಗಿದೆ. ಹಿಂದುಸ್ಥಾನದಲ್ಲಿ ಆಹಾರದ ಚಿಂತೆಯೊಂದಿಗೆ ಸ್ವಾತಂತ್ರ್ಯ ಚಿಂತೆಯು ತುಂಬಿದೆ. ಇತ್ತ ಕಾಶ್ಮೀರಿನಲ್ಲಿ ನರೇಂದ್ರ, ಪ್ರಜಾಮಂಡಲಗಳ ಆಂತರಿಕಲಹವು ತಲೆದೋರಿ ಮುಂದಿನ ಸ್ವಾತಂತ್ರ್ಯದೊಂದಿಗೆ ದೇಶದಲ್ಲೆಲ್ಲಾ ಏಳಬಹುದಾದ ಸಮಸ್ಯೆಗಳ ಕಡೆ ಹಿಂದೀಯರ ದೃಷ್ಟಿಯನ್ನು ಸೆಳೆಯುತ್ತಿದೆ. ಅತ್ತ ಅಖಿಲ ಭಾರತ ರೈಲ್ವೇ ಜನರ ಫೆಡರೇಶನ್ನಿನವರು ಸಂಧಾನವನ್ನೆಲ್ಲಾ ತಿರಸ್ಕರಿಸಿ, ಜೂನ್ ೨೭ರ ಮಧ್ಯರಾತ್ರೆ ಮುಷ್ಕರವನ್ನು ಪ್ರಾರಂಭಿಸ ನಿಶ್ಚೈಸಿದ್ದಾರೆ. ಮೊದಲೇ ಕಷ್ಟತರವಾಗಿ ಪರಿಣಮಿಸಿರುವ ಹಿಂದೀ ಆಹಾರ ಸಮಸ್ಯೆಯು ಇನ್ನು ಈ ರೈಲ್ವೇ ಮುಷ್ಕರದಿಂದ ಭೀಕರಾವಸ್ಥೆಯನ್ನು ತಾಳಬಹುದು.

ಸ್ವಾತಂತ್ರ್ಯದೇವಿಯ ರೂಪವು ದೂರದಿಂದ ಕಾಣುತ್ತಿರುವಾಗಲೇ ಈ ಗೊಂದಲಗಳೆದ್ದಿರುತ್ತವೆ. ಇನ್ನು ಡಿಲ್ಲಿಯಲ್ಲಿ ಬಲಿಷ್ಠ ಪ್ರಜಾಸಮ್ಮತ ಸರಕಾರವು ಬೇಗನೇ ಸ್ಥಾಪನೆಯಾಗದಿದ್ದರೆ ಗೊಂದಲಗಳು ವೃದ್ಧಿಯಾಗುತ್ತಾ ಹೋಗಬಹುದು. ಬ್ರಿಟಿಷ್ ಸಚಿವರು ಕೆಲವು ಕಾಲದಿಂದ ಮೌನವನ್ನು ತಾಳಿರುತ್ತಾರೆ. ಇನ್ನು ಅವರ ಮುಂದಣ ಕಾರ್ಯಚಟುವಟಿಕೆಗಳೇನಿವೆಯೆಂದು ವ್ಯಕ್ತವಾಗುವುದಿ

"V"

——

Phone No. 95] **ಜಯಾ ಕೆಫೆ** [ಫೋನು ನಂಬ್ರ ೯೫
(ರಿಜಿಸ್ಟರ್ಡ್)

ಬ್ರಾಹ್ಮಣರ ಶ್ರೇಷ್ಠ ತರಗತಿಯ

ಬೋರ್ಡಿಂಗ್-ಲಾಜಿಂಗ್

ಹಂಪನಕಟ್ಟೆ, ಮಂಗಳೂರು.

ಶುದ್ಧ ತುಪ್ಪದ ರುಚಿಶುಚಿಯ ಬಗೆಬಗೆಯ
ಸಿಹಿ ತಿಂಡಿ ಸರ್ವದಾ ಸಿದ್ಧವಿದೆ.

ನಮ್ಮ ಕೊಟಡಿಗಳು

ಆಧುನಿಕ ಸರ್ವಾನುಕೂಲತೆಗಳಿಂದ ಸುಸಜ್ಜಿತವಾಗಿವೆ.

ಸಂದರ್ಶಕರ ಸೇವೆ, ಮೇಲ್ವಿಚಾರ, ಅವರತೃಪ್ತಿಗಳೇ ಸಂಸ್ಥೆಯ ಪ್ರಾಮುಖ್ಯ ಧ್ಯೇಯ

ಹೆಡ್ ಆಫೀಸ್:
ಕೊಯಮುತ್ತೂರು.

ಎನ್. ವಿ. ಭಟ್,
ಪ್ರೊಪ್ರೈಟರ್.

ಕಾಶ್ಮೀರದ ಘಟನೆ

ಪಂಡಿತ ಜವಾಹರರು ಕಾಶ್ಮೀರದ ರಾಜ್ಯಾಡಳಿತದ ಕುರಿತು ಟೀಕಿಸುತ್ತ, ಇದು ಜನರನ್ನು ಅವಮಾನಿಸುವ ಒಂದು ಉದ್ದೇಶಪೂರ್ವಕವಾದ ಪ್ರಸಂಗವೆಂದು ತಮ್ಮ ದೊಂದು ಹೇಳಿಕೆಯಲ್ಲಿ ನುಡಿದಿರುತ್ತಾರೆ.

——

ವಾರ್ತಾಗುಚ್ಛ.

ಇಂಡಿಯದ ಘಟನಾತ್ಮಕ ಸಮಸ್ಯೆಯು ರಾಜಿಯಿಂದ ತೀರಬಹುದೆಂದು ಎಂ. ಜಿನ್ನರು ಸಿಮ್ಲದ ಒಂದು ಭಾಷಣದಲ್ಲಿ ಹೇಳಿರುತ್ತಾರೆ.

ಇಂಡಿಯಾ ಸರಕಾರದ ಅರ್ಥ ಸಚಿವರಾದ ಸರ್. ಆರ್ಚಿಬಾಲ್ಡ ರವ್ಲ್ಯಾಂಡ್ಸ ಅವರು ತಮ್ಮ ಹುದ್ದೆಯನ್ನು ಬಿಟ್ಟು ಸ್ವದೇಶಕ್ಕೆ ಹಿಂದಿರುಗಿರುತ್ತಾರೆ. ಹೋಮ್ ಮೆಂಬರರಾದ ಸರ್ ಜಾನ್ ಥೋರ್ನ್ ಅವರೂ ಬೇಗನೇ ಇಂಡಿಯದಿಂದ ಹೊರಡಲಿದ್ದಾರೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿ ಈ ವಾರದಲ್ಲಿ ಸೇರಬಹುದು; ಅದರ ಕಾರ್ಯಗಳು ತೀವ್ರ ಮುಗಿಯಬಹುದು; ನಿಯೋಗಗೋಷ್ಠಿಯವರು ಇದೇ ಜೂನ್ ತಾ. ೧೫ಕ್ಕೆ ಊರಿಗೆ ಹೊರಡಬಹುದು; ಅಷ್ಟರಲ್ಲಿ ಮಧ್ಯ ಕಾಲದ ಸರಕಾರದ ಸ್ಥಾಪನೆಯೂ ಕಾಂ. ಎಸೆಂಬ್ಲಿಯನ್ನು ಕೂಡಿಸುವ ತೀರ್ಮಾನವೂ ಆಗಬಹುದೆಂದಿದೆ.

೨೦ ವರ್ಷ ಯೋಜನೆಯ ಒಂದು ಎಮಾನ ತಯಾರಿ ಕಾರ್ಖಾನೆಯನ್ನು ಇಂಡಿಯಾ ಸರಕಾರದವರು ಬೆಂಗಳೂರಲ್ಲಿ ಸ್ಥಾಪಿಸುವರು. ಇಲ್ಲಿ ಇಂಡಿಯದ ಎಮಾನ ಬಲಕ್ಕೆ ಬೇಕಾದಷ್ಟು ಎಮಾನಗಳು ತಯಾರಾಗಲಿವೆ.

ತಮ್ಮ ಸಂಬಳ ಸಾರಿಗೆಗಳ ಹೆಚ್ಚಿಕೆಗಾಗಿ ಚಳವಳಿ ಹೂಡಿದ್ದ ಗ್ರಾಮ ಉದ್ಯೋಗಸ್ಥರ ಮೇಲಿನ ದಂಡನೆಯ ಅಪ್ಪಣೆಗಳನ್ನು ನಮ್ಮ ಸರಕಾರ ರದ್ದು ಮಾಡಿದೆ.

ಮದ್ರಾಸಿನಲ್ಲಿ ಹಾಳಾದ ಫಿಲ್ಮುಗಳಿಟ್ಟಿದ್ದ ಒಂದು ಕೊಟಡಿಗೆ ಬೆಂಕಿ ಹತ್ತಿ ಹರಡಿ ೫ ಮಂದಿ ಸತ್ತರು. ಹಲವರಿಗೆ ಗಾಯಗಳಾಗಿವೆ.

ಬೊಂಬಯಿಯಲ್ಲಿ ಶೆಡ್ಯೂಲ್ಡ್ ಜಾತಿಯ ಮತ್ತು ಮೇಲ್ಜಾತಿಯ ಕೆಲಸಗಾರರಿಗೆ ಕೈ ಕೈ ಹತ್ತಿ ಪೋಲೀಸರು ಹಲವು ಬಾರಿ ಗುಂಡು ಹಾರಿಸಿದರು.

ಶ್ರೀ ಶರತ್‌ಚಂದ್ರ ಭೋಸರು ರಂಗೂನಿಗೆ ಹೋಗಿ ಬರುವಂತೆ ಏರ್ಪಾಡುಗಳಾಗುತ್ತಿವೆ.

ಮದ್ರಾಸ್ ಎಸೆಂಬ್ಲಿಯಲ್ಲಿ ಪ್ರಧಾನರು ಈ ಸಂಸ್ಥಾನದ ಬಟ್ಟೆ ಪರಿಸ್ಥಿತಿಯ ಕುರಿತಾದ ಭಾಷಣ ಮಾಡಿ ಖಾದಿ ನಿರ್ಮಾಣಕ್ಕೆ ಪ್ರಾಶಸ್ತ್ಯ ಕೊಡಲಾಗುವುದೆಂದೂ ಖಾದಿ ಕೈಗಾರಿಕೆಗಾಗಿ ಹೆಚ್ಚು ಹಣ ವಿನಿಯೋಗಿಸಲಾಗುವುದೆಂದೂ ತಿಳಿಸಿರುವರು.

ಜನರೇ ಬ್ಯಾಂಕುಗಳನ್ನು ಕಟ್ಟುವವರು

ಹಣವಲ್ಲ! ಭದ್ರವಾದ ತಿಜೋರಿಗಳಲ್ಲ!!

- ಬ್ಯಾಂಕ್ ಕೆಲಸದ ನೂರಾರು ವಿಷಯಗಳನ್ನು ತಿಳಿದುಕೊಂಡು, ಗಿರಾಕಿಗಳ ಅಡಚಣೆ ಮತ್ತು ಅವಶ್ಯಕತೆ ಮುಂತಾದುವುಗಳನ್ನು ಗ್ರಹಿಸಿ ಅನೇಕ ರೀತಿಯಲ್ಲಿ ಸೇವೆ ಮಾಡುವವರು—
- ಅನುಕೂಲತೆ ಮತ್ತು ಭದ್ರತೆಯ ಸಲುವಾಗಿ ಬ್ಯಾಂಕಿನಲ್ಲಿ ಹಣ ತಂದಿಡುವ ಸ್ತ್ರೀ ಪುರುಷರು—
- ತಮ್ಮ ಆರ್ಥಿಕ ಸಮಸ್ಯೆಯಲ್ಲಿ ತಮ್ಮೊಡನೆ ಸಹಕರಿಸಿ ತಮಗೆ ಬ್ಯಾಂಕುಗಳಿಂದ ಸಹಾಯ ದೊರಕುವುದೆಂದು ನಿರೀಕ್ಷಿಸುವ ಸ್ತ್ರೀಪುರುಷರು—

ಇವರೇ ಬ್ಯಾಂಕಗಳನ್ನು ಕಟ್ಟುವವರು. ಈ ಬಗೆಯ ಮಾನವೀ ಸಂಬಂಧದಿಂದ ಬೆಳೆಯುವ ಮೈತ್ರಿಯೇ ಯಾವದೇ ಬ್ಯಾಂಕಿನ ಯಶ ಮತ್ತು ಅಭ್ಯುದಯಕ್ಕೆ ಅತ್ಯಂತ ಮಹತ್ವದ ಕಾರಣ. ಈ ರೀತಿ ಕಳೆದ 40 ವರ್ಷಗಳಿಗಿಂತಲೂ ಹೆಚ್ಚು ಕಾಲ ಜನತೆಯಿಂದ ಸಾರ್ವಜನಿಕ ಸೇವೆಯಲ್ಲಿ ದೊರೆತ ಮೈತ್ರಿಗೆ **ಕೆನರಾ ಬ್ಯಾಂಕ್** ಹೆಮ್ಮೆಪಡುತ್ತದೆ.

ESTD. 1906.
CANARA BANK LIMITED.
(Incorporated in British India—Liability of Members Limited)

ನಾಡಿಗೆ ನಿಷ್ಠೆಯಿಂದ ಇರುವುದು; ೨. ಸದಾ ಅಹಿಂಸಾಪರರಾಗಿರುವುದು; ೩. ಸೇವಾ ಕಾರ್ಯಗಳ ಸಲುವಾಗಿ ಯಾವುದೊಂದು ಪ್ರತಿಫಲವನ್ನೂ ಅಪೇಕ್ಷಿಸದೆ ಇರುವುದು; ೪. ಪರಿಶುದ್ಧವಾದ ಜೀವನದಲ್ಲಿ ಬಾಳುತ್ತಿರುವುದು.

ಖಾನರು, "ಎದ್ಯೆ ಸಂಪತ್ತುಗಳ ನಡುವೆ ಅಕಸ್ಮಾತ್ತಾಗಿ ತಲೆ ಎತ್ತಿದ ಒಬ್ಬ ನಿರಕ್ಷರ ಕುಕ್ಷಿ"ಯಾಗಿದ್ದು, ಪಾಶ್ಚಾತ್ಯ ಪ್ರಗತಿ ಮತ್ತು ಔದ್ಯೋಗಿಕ ಉನ್ನತಿಯನ್ನು ಎರೋಧಿಸುತ್ತಿದ್ದಾರೆ ಎಂಬುದನ್ನು ಭಾರತದ ಜನರಿಗೆ ತೋರಿಸುವ ಮಗದೊಂದು ಯತ್ನವನ್ನೂ ಬ್ರಿಟಿಷರು ಅನಂತರ ಮಾಡಿದರು. ಆದರೆ ಈ ಅಬದ್ಧಪ್ರಸಂಗವೂ ವಾಸ್ತವಿಕತೆಯ ಮುಂದೆ ನಿಸ್ತೇಜವಾಯಿತು; ಯಾಕಂದರೆ ಖಾನರ ಸ್ವತಃ ಸಹೋದರರಾದ ಗಡಿನಾಡಿನ ಪ್ರಧಾನಿ ಡಾ। ಖಾನ್ ಸಾಹೇಬರು, ಇಂಗ್ಲೆಂಡಿನಲ್ಲಿ, ಜವಹರಲಾಲರ ಸಹಪಾಠಿಯಾಗಿ ವ್ಯಾಸಂಗವನ್ನು ಮಾಡಿದ್ದರು. ಅವರ ಇನ್ನೊಬ್ಬ ಸಂಬಂಧಿಕರೂ, ಎದ್ಯಾಭ್ಯಾಸಕ್ಕೆ ಇಂಗ್ಲೆಂಡಿಗೆ ಹೊರಟು ಹೋಗುವಾಗ, ಅವರನ್ನು ಬೀಳ್ಕೊಡುತ್ತ ಹೀಗೆಂದು ಖಾನರು ಹರಸಿದ್ದರು:—"ಆಂಗ್ಲೆಯನನ್ನು ಸಮರದಲ್ಲಿ ಜಯಶೀಲನನ್ನಾಗಿಯೂ, ದೊಡ್ಡ ಸಂಘಟನಾ ಕಾರ್ಯಕರ್ತನನ್ನಾಗಿಯೂ ಯಾವುದು ಮಾಡಿತ್ತೋ ಅದನ್ನು ನೀನೂ ಹೋಗಿ ಕಲಿ. ಆದರೆ ನೀನು ಏನಾಗಿರುವೆ ಎಂಬುದನ್ನು ಮಾತ್ರ ಮರೆಯಬೇಡ."

ಗಡಿನಾಡಿನ ಗಾಂಧಿಯವರ ಎರುದ್ಧ ಪಠಾಣ ರೈತರ ಹೃದಯದಲ್ಲಿ, ಎಷ ಬೀಜವನ್ನು ಬಿತ್ತಲು ಸರಕಾರವು ಹೂಡಿದ ಎಲ್ಲ ಯತ್ನವೂ ವಿಫಲಗೊಂಡಿತು. ರೈತ ವರ್ಗವು ತನ್ನ ಭಾವೀ ಭಾಗ್ಯವಿಧಾತರಾದ ಗಡಿನಾಡಿನ ಗಾಂಧಿಯವರ ಮುಖಂಡತ್ವವನ್ನು ಕೈಬಿಡಲಿಲ್ಲ. ಖಾನರು ಅತ್ಯಂತ ಸಂಭಾವಿತರು; ಅನ್ಯಾಯಕ್ಕೆ ಬಗ್ಗದ ಅಖಂಡ ವ್ಯಕ್ತಿ ಎಂಬುದನ್ನು ರೈತರು ಕಂಡುಕೊಂಡಿದ್ದರು. ರೈತರ ಕಷ್ಟ-ಸಂಕಷ್ಟಗಳ ವಿಚಾರದಲ್ಲಿ ಖಾನರು ತನ್ನ ಬಾಲ್ಯದಲ್ಲೇ ಅನುಭವಗೊಂಡಿದ್ದರು ಅವರು ಚಿಕ್ಕವರಿದ್ದಾಗ, ತನ್ನ ತಂದೆಯವರಿಂದ ೭೦ ಎಕ್ರೆ ಜಮೀನು, ನಾಲ್ಕು ಎತ್ತುಗಳು, ಎರಡು ಆಳುಗಳನ್ನು ಪಡೆದು ಆ ಜಮೀನಿನಲ್ಲಿ ಸ್ವತಃ ಸಾಗುವಳಿ ತೊಡಗಿದವರು ಅವರು ಉಳುವುದು, ಬಿತ್ತುವುದು, ಕೊಯ್ಯುವುದೇ ಇತಾದಿ ಕೆಲಸಗಳನ್ನು ಸ್ವತಃ ಮಾಡಿದವರು ಅವರು ಆಗ ಇತರ ರೈತರೊಡನೆ ಹಿಲಿತರಾಗಿ ಅವರ ಜೀವನದ ಪಾಡನ್ನು ತಿಳಿಕೊಂಡಿದ್ದರು. ತನ್ನ ಗದ್ದೆಯಲ್ಲಿ ಕೆಲಸ ವಹ್ನು ಮಾಡಿ, ಮಧ್ಯಾಹ್ನಕ್ಕೆ ತನ್ನ ಹಿಪ್ಪು ಲಿನೇರಳೆ ಹಣ್ಣಿನ ಗಿಡಗಳ ಪೊದರಿನ ಕೆಳಗೆ ಬಂದು, ಮಧ್ಯಾಹ್ನದ ಉಪಹಾರವನ್ನು ತೆಗೆದುಕೊಂಡು ಅಲ್ಲಿ ಒಂದು ಗಂಟೆ ವಿಶ್ರಾಂತಿಯನ್ನು ಹೊಂದುತ್ತಿದ್ದರು. ಆಗ ತನ್ನೊಟ್ಟಿಗೆ ತನ್ನ ಆಳುಗಳನ್ನೂ, ಕುಳ್ಳಿರಿಸಿಕೊಂಡು ಅವರೂ ವಿಶ್ರಾಂತಿ ಸುಖವನ್ನು ಅನುಭವಿಸುವಂತೆ ಮಾಡುತ್ತಿದ್ದರು. ಈಗ ತನ್ನ ಸ್ವಂತ ಬೇಸಾಯವನ್ನು, ತನ್ನ ಅಭಿರುಚಿಯ ವಿರುದ್ಧ ಬಲಾತ್ಕಾರದಿಂದ ಬಿಟ್ಟುಬಿಟ್ಟಿದ್ದರೂ—ತನ ರಾಜಕಾರಣ ಮತ್ತು ಹೊಣೆಗಾರಿಕೆಯ ಕೆಲಸ ಕಾರ್ಯಗಳ ನಡುವೆಯೂ, ಅವರು ಸಂಜೆ ಗಡಿನಾಡಿನ ರಮ್ಯ ಬೆಟ್ಟಗಳ ಕಡೆ ತನ್ನ ರೈತ ಬಂಧುಗಳೊಡನೆ ತಿರುಗಾಡುತ್ತಾರೆ. ಆ ಸುಯೋಗವನ್ನು ವ್ಯರ್ಥಗೊಳಿಸದೆ, ಕೃಷಿಗಳ ಸಮಸ್ಯೆ, ಬೀಜ, ಮಳೆ ಇತ್ಯಾದಿಗಳ ಕುರಿತು ಅವರೊಡನೆ ಖಾನರು ಚರ್ಚಿಸುತ್ತಾರೆ; ಸಂಭಾಷಿಸುತ್ತಾರೆ.

ಗಡಿನಾಡಿನ ಗಾಂಧಿಯವರು ಕಠಿನ ಹಿಂಸಾವಾದಿಗಳಾದ ಪಠಾನರ ನಡುವೆ ಬೆಳೆದು ಒಂದು ಕಾಲಕ್ಕೆ ಅವರೂ ಕೂಡ —ವಾಲ್ಮೀಕಿಯಂತೆ ಹಿಂಸಾಪರರಾಗಿದ್ದರು. ಆದರೆ ಮುಂದೆ ಮಹಾತ್ಮಾಜಿಯವರಿಂದ, ರಾಷ್ಟ್ರೀಯ ದೀಕ್ಷೆಯನ್ನು ಹೊಂದಿ ಅವರು ಒಬ್ಬ ಉಚ್ಚ ಅಹಿಂಸಾವಾದಿ ವ್ಯಕ್ತಿಯಾಗಿಯೇ ಪರಿಣಾಮಗೊಂಡುದನ್ನು ನೋಡಿ, ಅವರ ಜನರು ಆತ್ಯಾಶ್ಚರ್ಯಪಡದೆ ಇಲ್ಲ ಪಠಾಣ ನಾಯಕರಾದ ಖಾನರು ತನ್ನಂತೆಯೇ ತನ್ನ ಸ್ವಜಾತಿ ಬಂಧುಗಳನ್ನೂ ಅಹಿಂಸೆಗೆ ತಿರುಗಿಸಿದರು. ಇದರಿಂದ ಖಾನರ ಪರಿಶೀಲನಾ ಬುದ್ಧಿ ಮತ್ತು ಆತ್ಮಗುಣ—ಸಂಯಮ ಶಕ್ತಿಯ ಅಗಾಧತೆಯು ನಮಗೆ ಮನದಟ್ಟಾಗುತ್ತದೆ.

ಖಾನರು ಒಬ್ಬ ಹಿಂಸಾವಾದಿ ಮನುಷ್ಯರಾಗಿದ್ದಾಗ ಅವರು ಕಡು ಹಿಂಸಾಪರರಾಗಿದ್ದರು. ಬಾಲ್ಯದ ಒಂದು ಘಟನೆಯಿಂದ, ಅವರ ಪ್ರತೀಕಾರ ಬುದ್ಧಿಯ ಚಿತ್ರದ ಅರಿವು ನಮಗಾಗುತ್ತದೆ. ಖಾನರ ಸಂಬಂಧಿಯಾದ ದಿವಾನಿ ಫುಲ್‌ಸಫೀ ಎಂಬ ಹೆಸರಿನವನು ಹುಡುಗನಾಗಿದ್ದಾಗ ಅತನು ಗುನ್ಯಾ ಎಂಬ ಜಗಳಗಂಟನಿಂದ ಹೊಡೆಯಲ್ಪಟ್ಟನು. ಅಪಮಾನಗೊಂಡ ಹುಡುಗನು ಖಾನರ ಬಳಿಗೆ ಬಂದು ದೂರು ಕೊಟ್ಟನು. ಕ್ರೋಧಾವೇಶಗೊಂಡ ಖಾನರು ನೆಟ್ಟಗೆ ಹೋಗಿ ಆ ಜಗಳಗಂಟ ಹುಡುಗನನ್ನು ಹಿಡಿದು, ನೆಲಕ್ಕೆ ಕೆಡವಿ ರಕ್ತ ಸುರಿಯುವ ವರೆಗೆ ಅತನಿಗೆ ಬಡಿದರು ಮತ್ತು ಪಠಾಣರ ಆಣೆ ಇಡುವ ರೀತಿಯಲ್ಲಿ—ಅತನ ಮೂಗನ್ನು ನೆಲಕ್ಕೆ ತಿಕ್ಕಿಸಿ, ಕಿವಿಗಳ ರಂಧ್ರಗಳಿಗೆ ಅತನ ಬೆರಳನ್ನು ತೂರಿಸಿ, ಇನ್ನು ಮುಂದೆ ಅತನು ಯಾವ ಮಕ್ಕಳನ್ನೂ ಸತಾಯಿಸುವುದಿಲ್ಲ ಎಂದು, ದೇವರಿಗೂ ಪವಿತ್ರಾತ್ಮರಾದ ಸಾಧು-ಸಂತರಿಗೂ ಅಭಿವಚನವನ್ನು ಅತನ ಬಾಯಿಂದ ಕೊಡಿಸುವ ವರೆಗೂ ಅವರು ಬಿಡಲಿಲ್ಲ.

ತನ ರಾಜಕಾರಣದ ಆರಂಭದಲ್ಲಿ ಖಾನರು ಉಗ್ರ ಕರ್ತವ್ಯಚಿಂತನೆಯನ್ನು ಸಾಮಾನ್ಯ ಬಿಟ್ಟು ಕೊಟ್ಟಿರಲಿಲ್ಲ ಆಗ ಬ್ರಿಟಿಷರ ಅಜನ್ಮಶತ್ರುವಾಗಿದ್ದ ಟುರಂಗ್‌ಝಾಯಿಯ ಹಾಜೀ ಅವರು, ಇತರ ತಮ್ಮ ಅನುವರ್ತಿಗಳೊಡನೆ, ಮಹಮದ್ ಬೆಟ್ಟಗಳಿಗೆ ಓಡಿ ತಲೆ ಮರೆಸಿಕೊಂಡರು. ಅನಂತರ ಗವರ್ನರನು ಕ್ರಾಂತಿಕಾರನಾದ ಮಗನನ್ನು ತರಿಸಿಕೊಳ್ಳುವುದಕ್ಕಾಗಿ ಖಾನರ ತಂದೆಯ ಮನವನ್ನೊಲಿಸಿಕೊಂಡನು. ಒಂದು ಮಸೀದಿಯಲ್ಲಿ, "ಮರಳುವ ವೀರ"ನನ್ನು (ಖಾನರನ್ನು) ಸ್ವಾಗತಿಸುವ ಸಲುವಾಗಿ, ಜನರು ಒಂದು ದೊಡ್ಡ ಸಭೆಯನ್ನು ಕೂಡಿಸಿದ್ದರು. ಆ ಸಂದರ್ಭದಲ್ಲೇ ಈ ಗಫರ್‌ಖಾನರಿಗೆ "ಬಾದಷಹಾ ಖಾನ್" ಎಂಬ ಬಿರುದನ್ನು ಕೊಡಲಾಯಿತು.

ಸ್ವಲ್ಪ ಕಾಲ ಶಾಂತ ವಾತಾವರಣವು ಆವರಿಸಿತ್ತು. ಆದರೆ ಒಂದು ದಿನ ಉತ್‌ಮುಂಝಾಯಿ ಗ್ರಾಮವನ್ನು,—ಮದ್ದುಗುಂಡುಗಳ ಸಹಿತವಾದ ಕೋವಿಗಳನ್ನು ಧರಿಸಿದ ಸರಕಾರೀ ಸಿಪಾಯಿಗಳ ಒಂದು ದಂಡು ಬಂದು ಮುತ್ತಿತು. ಕೇರಿ, ಬೀದಿಗಳಲ್ಲಿ ಭಯೋತ್ಪಾದಕ ಗಲಭೆಯನ್ನುಂಟು ಮಾಡಿತು. ಪಠಾಣರ ಗುಂಪುಗಳ ನಾಯಕರನ್ನು, ನೇರಾಗಿ ನಿಲ್ಲಿಸಿದರು; ಮತ್ತು ಗುಂಡುಗಳನ್ನು ಅವರ ಎದೆಗೆ ಹಾರಿಸಲೂ ಸಿದ್ಧರಾದರು. ಅಷ್ಟರಲ್ಲಿ ದಂಡಿನ ನಾಯಕನು, ಕುದುರೆಯಲ್ಲಿ ಕುಳಿತು, ಭರದಿಂದ ಎತ್ತಲಿಂದಲೋ ಬಂದು ಸಿಪಾಯಿಗಳನ್ನು ತಡೆದನು. ದಂಡಿನ ನಾಯಕನು ಪಠಾಣರನ್ನು ಕ್ಷಮಿಸಿ, ಅವರನ್ನು ಉದ್ದೇಶಿಸಿ—ಒಂದು ಗಂಭೀರ ಭಾಷಣ ಕೊಟ್ಟನು. ಇನ್ನು ಮುಂದೆ ಪಠಾಣರು ದಂಗೆ, ಗಲಭೆಗಳಲ್ಲಿ ಪ್ರವೇಶಿಸದ ಹಾಗೆ ಅವರಿಗೆ ಭಯವನ್ನು ಹುಟ್ಟಿಸಬೇಕೆಂದೇ ಈ ನಾಟಕವನ್ನು ಉದ್ದೇಶಪೂರ್ವಕವಾಗಿ ಆಡಿ ತೋರಿಸಲಾಗಿತ್ತು ದಂಡಿನ ನಾಯಕನ ಬ್ರಿಟಿಶರ ಶೌರ್ಯದ ಕುರಿತಾದ ಆ "ಗಂಭೀರ ಭಾಷಣ"ವು ಅಲ್ಲಿಯ ಜನರಿಗೆ ಮುಂದೆ ಅಂಗಡಿ ಬೀದಿಯಲ್ಲಿ ನಕಲಿ ಮಾತಾಯಿತು.

ತನ್ನ ಮಗನೇ ಅಲ್ಲಿನ ದಂಗೆಗಳಿಗೆ ಹೊಣೆಯಾದುದರಿಂದ, ತನ್ನೊಬ್ಬನನ್ನೇ ಸರಕಾರವು ಜಾಎೂನು ತೆಕ್ಕೊಳ್ಳಬೇಕೆಂದು ಖಾನರ ತಂದೆಯು ಎಷ್ಟು ಹೇಳಿಕೊಂಡರೂ, ಬ್ರಿಟಿಶ್ ಖಡ್ಗದ ಖ್ಯಾತಿಯನ್ನು ವರ್ಣಿಸಿದ್ದ ಆ ದಂಡಿನ ನಾಯಕನು ಒಪ್ಪಲಿಲ್ಲ. ಖಾನರ ತಂದೆಯ ಸಮೇತ ಅವರನ್ನೂ ಗುಂಪಿನ ಇತರ ೭೯ ಮಂದಿ ಜನರನ್ನೂ ಬಲಾತ್ಕಾರದಿಂದ ಬಂಧಿಸಿ, ಸಿಪಾಯಿಗಳು ಒಯ್ದರು. ಈ ಸಂದರ್ಭದಲ್ಲಿ ಕೆಲ ಸಿಪಾಯಿಗಳು ಖಾನರ ಮನೆಯನ್ನು ಹೊಕ್ಕರು ಇದರಿಂದ ಅಲ್ಲಿನ ಸ್ತ್ರೀಯರು ಬಹಳ ಅಪಮಾನಿತರಾದರು.

——

ಸಿಂಹಾಸನ ತ್ಯಾಗ

ತೆಹರಿ ಘರ್ವಾಲಿನ ಮಹಾರಾಜರಾದ ಸರ್ ನರೇಂದ್ರ ಷಹಾ ಅವರು ತಮ್ಮ ಮಗನಿಗೆ ಸಿಂಹಾಸನವನ್ನು ಬಿಟ್ಟು ಕೊಟ್ಟಿದ್ದಾರೆ.

USE
OUR GENUINE
EUCALYPTUS OIL
FOR ALL
ACHES & PAINS

FOR HEALTH
USE
SILVER KING
CASTOR OIL
LAKSHMI OIL MILLS.
COIMBATORE.

1945 A YEAR OF ALL ROUND PROGRESS

Completed New Business over		Rs.	20,30,000
Premiums, Interest &c.	,,	Rs.	3,05,000
Govt. & Trust Securities	,,	Rs.	4,25,000
Life Assurance Fund	,,	Rs.	6,30,000
Total Assets	,,	Rs.	7,50,000

Very low Expense Ratio

Reviewing the progress of the Company in 1945 Mr. D. Sesha Iyer, M. A., F. I. A., Actuary, writes:

"If the same policy as you have now been following, is continued in future, I am sure the Company would be able to put up a good record at the next valuation."

A decisive Organisation Programme is now on Hand.

APPLICATIONS FOR SALARIED APPOINTMENT OF **Organisers** and for **Chief & Special Agencies** on commission basis are invited.

The Popular Insurance Company, Limited.
MANGALORE.

ಅಂದಿನ "ಗಡಿನಾಡಿನ ಗಾಂಧಿ"

÷o!o÷

ಭಾರತಕ್ಕೆ ಇನ್ನೊಬ್ಬ ಗಾಂಧಿ ಇರುವರು. ಅವರು ಜನ್ಮತಃ ಗಾಂಧಿಯಲ್ಲ.–ಗಡಿನಾಡಿನ ಜನಪ್ರೀತ ಪಠಾಣ ನಾಯಕರಾದ ಖಾನ್ ಅಬ್ದುಲ್‌ಗಫಾರ್ ಖಾನರು. ಖಾನರ ಮೇಲೆ ಅಭಿಮಾನವುಳ್ಳ ಭಾರತೀಯರು ಅವರನ್ನು "ಗಡಿನಾಡಿನ ಗಾಂಧಿ" ಎಂದು ಕರೆಯುತ್ತಾರೆ. ಖಾನರನ್ನು ಅವರ ಹುಟ್ಟು ಹೆಸರಿನಿಂದ ತಿಳಿಯುವ ಭಾರತೀಯರು ಅತ್ಯಲ್ಪ. ಸಾಮಾನ್ಯ ಎಲ್ಲರೂ ಅವರನ್ನು "ಗಡಿನಾಡಿನ ಗಾಂಧಿ" ಎಂತಲೇ ಸಂಬೋಧಿಸುತ್ತಾರೆ. ಭಾರತದ ನಾಯಕರಲ್ಲಿ ಮಹಾತ್ಮಾಜಿಯವರು "ಗಿಡ್ಡ ವ್ಯಕ್ತಿ" ಎಂದೂ, ಖಾನರು "ಎತ್ತರದ ವ್ಯಕ್ತಿ" ಎಂದೂ ಪರಿಗಣಿಸಲಾಗಿದೆ.

ಗಡಿನಾಡಿನಲ್ಲಿ ಖಾನ ಅಬ್ದುಲ್‌ಗಫಾರ್ ಖಾನರು ಮುಸ್ಲಿಂ ಸಮಾಜದ ಪ್ರತಿಷ್ಠೆಯನ್ನು ಅದರ ಪ್ರತಿನಿಧಿಯಾಗಿ ಕಾಯುತ್ತಿದ್ದಾರೆ; ಅಲ್ಲದೆ ಅವರು ಭಾರತದ ಹಿಂದು ಮುಸ್ಲಿಂ ಸಂಘಟನೆಯ ಒಬ್ಬ ಮಹಾ ಘಟಿಕರಿರುತ್ತಾರೆ. ಇವರು ತನ್ನ ಸ್ವಂತ ಸಮಾಜದಿಂದ ಹೇಗೋ ಹಾಗೆ ಬಹು ಸಂಖ್ಯಾಕರಾದ ಹಿಂದು ಸಮಾಜದಿಂದಲೂ ಪ್ರೀತಿ, ಗೌರವ, ವಿಶ್ವಾಸಗಳನ್ನು ಏಕ ರೀತಿಯಾಗಿ ಗಳಿಸಿರುತ್ತಾರೆ. ಮಾನವೀಯತೆ, ಸತ್ವ, ಆಕಾಂಕ್ಷೆ, ನಿಃಸ್ವಾರ್ಥತೆಗಳಲ್ಲಿ ಅವರು ತನ್ನ ಗುರುವಾದ ಮಹಾತ್ಮಾಜಿಯವರನ್ನು ಸ್ಪರ್ಧಿಸುತ್ತಾರೆ. ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಪದವಿಯನ್ನು ಎಷ್ಟೋ ಸಲ ಖಾನರ ಮುಂದೆ ಒಡ್ಡಿದಾಗ ಅವರು ಅದನ್ನು ನಿರಾಕರಿಸಿದರು. ಅಂದ ಮೇಲೆ ಅವರು ಹೆಸರಿಗೆ ಏಷ್ಟು ಅಂಜುತ್ತಾರೆ ಎಂಬುದು ಇದರಿಂದ ಪ್ರತ್ಯಕ್ಷವಾಗುತ್ತದೆ.

ಗಡಿನಾಡಿನ ಗಾಂಧಿಯವರು ಒಬ್ಬ ಅಸಾಧ್ಯ ಮನುಷ್ಯ. ಭಯಂಕರ ಮನುಷ್ಯರಾದ ಪಠಾಣರ ನಡುವೆ ತಮ್ಮ ರಾಜ್ಯ ಭಾರವನ್ನು ನಿರಾಯಾಸವಾಗಿ ಸಾಗಿಸಲು ಪಠಾಣ ಸಮಾಜದಲ್ಲಿ ಅಧಿಕ ವರ್ಚಸ್ಸನ್ನು ಬೀರುತ್ತಿದ್ದ ಖಾನರಂಥ ವ್ಯಕ್ತಿಯು ಸರಕಾರಕ್ಕೆ ಬೇಕಾಗಿತ್ತು. ಆದರಂತೆ ಖಾನರ ಚಟುವಟಿಕೆಗಳು ಭಯಕಾರಿಯಾಗಿದ್ದವು. ಇದೇ ಕಾರಣದಿಂದ, ಸರಕಾರವು ಅವರ ಮುಂದೆ ದೊಡ್ಡ ದೊಡ್ಡ ಬಿರುದು ಹಾಗೂ ಅಧಿಕಾರ ಸ್ಥಾನಗಳ ಪ್ರಲೋಭನಗಳನ್ನು ಒಡ್ಡಿತು. ಆದರೆ ಖಾನರು ಪ್ರತಿಯೊಂದನ್ನೂ ನಿರಾಕರಿಸಿದರು

ಖಾನರ ಕ್ರಾಂತಿಕಾರ ಹುರುಪನ್ನು ಆರಿಸಲು ಅವರನ್ನು ಸರಕಾರವು ಮುಂದೆ ಅನೇಕ ಸಲ ಪೀಡಿಸಿ ಹಿಂಸೆಯನ್ನು ಕೊಟ್ಟಿತು; ಕಾರಾಗೃಹದಲ್ಲಿ ಇಟ್ಟಿತು. ಆದರೆ ಆ ಪಠಾಣ ರಾಕ್ಷಸ ಖಾನರು ಸರಕಾರಕ್ಕೆ ಮಣಿಯಲಿಲ್ಲ. ಒಂದು ಬಾರಿ ಅವರಿಗೆ ಸರಕಾರವು ಹತ್ತು ವರುಷಗಳ ಸಶ್ರಮ ಸಜೆಯನ್ನು ವಿಧಿಸಿ,ಅವರನ್ನು ಡೇರಾ ಇಸ್ಮಾಯಲ್‌ಖಾನದ"ನರಕತುರಂಗ"ದಲ್ಲಿ ಹಾಕಿ ಬಂಧಿಸಿತು. ಅವರ ಕೈಗಳಿಗೆ ಲೋಹದ ಬಳೆಯನ್ನು ತೊಡಿಸಲಾಗಿತ್ತು. ಅದು ತೀರಾ ಚಿಕ್ಕದಿದ್ದು, ಅವರ ಕೈಗಳ ಚರ್ಮ, ಮಾಂಸಗಳನ್ನು ಹರಿದು ಹೊರಕ್ಕೆಳೆಯಿತು.

ಅವರು ಕೊನೆಗೆ ತುರಂಗದಿಂದ ಬಂಧ ವಿಮೋಚನೆಯಾಗಿ ಹೊರಗೆ ಬಂದಾಗ, ಅವರ ಮೊದಲಿನ ೨೨೦ ಪೌಂಡು ಭಾರದಲ್ಲಿ ೧೦೦ ಪೌಂಡ್ ಭಾರವು ನಷ್ಟಗೊಂಡಿತ್ತು; ಆರು ಹಲ್ಲುಗಳು ಉದುರಿದ್ದವು. ಆದರೆ ಗಡಿನಾಡಿನ ಗಾಂಧಿಗಳು ಸಿಂದಿಗಿಂತಲೂ ಅಧಿಕವಾದ ಒಬ್ಬ ರಾಷ್ಟ್ರೀಯ ಯೋಧನ ಶೌರ್ಯದಿಂದ ಹೊರಗೆ ಬಂದರು. ಅವರು ತನ್ನ ಉದುರಿ ಹೋಗಿ ಹೊಸತಾಗಿ ಬಂದ ಹಲ್ಲುಗಳನ್ನು ಬಿಟ್ಟು, ಮುಗುಳ ನಗೆ ಬೀರುತ್ತ, ಬ್ರಿಟಿಶರನ್ನು ಉದ್ದೇಶಿಸಿ ಈ ರೀತಿ ಹೇಳಿಕೊಂಡರು: "ನೀವು ನರಕಕ್ಕೆ ಪ್ರೀತಿಯಿಂದ ನಿಮ್ಮೊಡನೆ ಒಬ್ಬ ಪಠಾಣನನ್ನು ಒಯ್ಯುವ ಸಾಹಸ ಮಾಡಬಹುದು; ಆದರೆ ಬಲಾತ್ಕಾರದಿಂದ ನೀವು ಆತನನ್ನು ಸ್ವರ್ಗಕ್ಕೂ ಕೂಡ ಒಯ್ಯಲಾರಿರಿ."

ಖಾನರನ್ನು ತಮ್ಮ ಬಲೆಗೆಹಾಕಿಕೊಳ್ಳಲು ಅಸಮರ್ಥರಾದ ಬ್ರಿಟಿಷ್‌ಅಧಿಕಾರಿಗಳು ಖಾನರ "ಯಥಾರ್ಥ ಧ್ಯೇಯ ಆಕಾಂಕ್ಷೆ"ಗಳ ಮೇಲೆ ಅಪಪ್ರಚಾರದ ಬಾಣಗಳನ್ನು ಎಸೆಯಲು ತೊಡಗಿದರು. ಖಾನರು ಹಿಂದು ವಿರೋಧಿ ಎಂಬುದಾಗಿ ಅವರು ಹಿಂದುಗಳ ಹೃದಯದಲ್ಲಿ ಖಾನರ ಬಗ್ಗೆ ವಿಷ ಬೀಜಗಳನ್ನು ಬಿತ್ತ ತೊಡಗಿದರು. "ಬ್ರಿಟಿಷರ ಅಧಿಕಾರವನ್ನು ಕಿತ್ತೊಗೆದು, ಅಲ್ಲಿ ಮುಸ್ಲಿಮರ ಸ್ವಾಯತ್ತತೆಯನ್ನು ಸ್ಥಾಪಿಸಲು ಖಾನರು ದಾರಿಯನ್ನು ಸುಗಮಗೊಳಿಸುತ್ತಿದ್ದಾರೆ" ಎಂಬುದಾಗಿ ಅಧಿಕಾರಿಗಳು ಪ್ರಚುರಿಸಿದರು. ಗಡಿನಾಡಿನ ಗಾಂಧಿಯವರು ಆ ಅಪಪ್ರಚಾರವನ್ನು ಖಂಡಿಸಿದರು ಮತ್ತು ಸರ್ವ ಜನರಿಗೆ ಈ ರೀತಿ ಉತ್ತರವಿತ್ತರು: "ನಾನು ಕಾಂಗ್ರೆಸನ್ನು ಸೇರಿದುದಕ್ಕಾಗಿ ಜನರು ನನ್ನನ್ನು ಜರೆಯುತ್ತಿದ್ದಾರೆ. ಕಾಂಗ್ರೆಸು ರಾಷ್ಟ್ರೀಯ ಹೊರತು ಹಿಂದು ಸಂಸ್ಥೆಯಾಗಿರುವುದಿಲ್ಲ. ಹಿಂದುಗಳು, ಯೆಹೂದಿಯರು, ಸೀಕರು, ಪಾರ್ಶಿಗಳು ಮತ್ತು ಮುಸ್ಲಿಮರು ಸೇರಿ ಘಟನೆಯಾದ ಸಂಸ್ಥೆ ಅದು. ಕಾಂಗ್ರೆಸು ಒಂದು ಸಂಘಟನಾ ಸಂಸ್ಥೆ ಅನಿಸಿ, ಅದು ಬ್ರಿಟಿಷರ ವಿರುದ್ಧ ಕೆಲಸ ಕಾರ್ಯಗಳನ್ನು ಮಾಡುತ್ತದೆ. ಬ್ರಿಟಿಷ್ ಜನಾಂಗವು ಕಾಂಗ್ರೆಸಿನ ಮತ್ತು ಪಠಾಣರ ಶತ್ರುವಾಗಿ ಇದೆ. ಆದುದರಿಂದ ನಾನು ಕಾಂಗ್ರೆಸನ್ನು ಸೇರಿ, ಸಾಮೂಹಿಕ ಹಿತಾರ್ಥ ಸಾಧನೆಗಾಗಿ ಕಾದುತ್ತಿದ್ದೇನೆ".

ಕಾಂಗ್ರೆಸ್ ವಾದಿಗಳು ಖಾನರ ಮೇಲೆ ಕೋಪಗೊಂಡು ಸಂಶಯ ತಳೆಯುವುದಕ್ಕೆ ಇನ್ನೊಂದು ಯುಕ್ತಿಯನ್ನೂ ಸರಕಾರವು ಹೂಡಿತು. ಖಾನರ ಪಠಾಣ ಸ್ವಯಂಸೇವಕ ದಳವನ್ನು "ಕೆಂಪಂಗಿಯ ಪಡೆ" ಎಂಬುದಾಗಿ ಕರೆಯಲಾಗಿತ್ತು ಆ ಪಡೆಯ ಸ್ವಯಂಸೇವಕರ ಪೋಷಾಕಿನ ಬಣ್ಣವು ಕೆಂಪಾಗಿದ್ದುದರಿಂದ ಆ ಪಡೆಗೆ"ಕೆಂಪಂಗಿಯ ಪಡೆ" ಎಂಬ ಹೆಸರು ಬಂದಿತ್ತು. (ಗಡಿನಾಡಿನಲ್ಲಿ ಕೆಂಪು ಇಟ್ಟಿಗೆಗಳು ಧಾರಾಳವಾಗಿ ಸಿಗುತ್ತಿತ್ತು. ತಮ್ಮ ಅಂಗಿಗೆ ಬಣ್ಣ ಹಾಕಲು ಅನುಕೂಲವಾಗಿ ತಮಗೆ ಅದರ ಪುಡಿಯು ಸುಲಭ ದರದಲ್ಲಿ ದೊರಕುತ್ತಿದ್ದ ದರಿಂದಲೇ ಕೆಂಪು ಬಣ್ಣವನ್ನು"ಕೆಂಪಂಗಿಯ ಪಡೆ"ಯವರು ಬಳಸಿದ್ದುದು.) ಈ "ಕೆಂಪಂಗಿಯ ಪಡೆ"ಯು ಕಮ್ಯುನಿಸ್ಟ್ ಪಕ್ಷದ ಅಂಗವೆಂದೂ, ವೋಸ್ಕ್ರೋದ ಚಟುವಟಿಕೆಗಳನ್ನು ಇಲ್ಲಿ ಸ್ಟಾಲಿನರ "ಬಾಡಿಗೆ ಪ್ರತಿನಿಧಿ"ಯಾಗಿ ವ್ಯವಸ್ಥೀಕರಿಸಲು ಖಾನರು ನಿಯೋಜಿಸಲ್ಪಟ್ಟಿರುತ್ತಾರೆ ಎಂದೂ ಸರಕಾರವು ಅಪಪ್ರಚಾರದ ಪ್ರಕಟಣೆಯನ್ನು ಮಾಡಿತು. ಬೊಂಬಯಿ ಅಹಮ್ಮದಬಾದ್ ಗಿರಣಿ ಒಡೆಯರು ಗಾಂಧೀಜಿಯವರ ಕಾರ್ಯಕ್ರಮಗಳ ಪೋಷಕರಿದ್ದರು. ಅವರು ಈ ಅಪೂರ್ವ ವಾರ್ತಾ ಪ್ರಕಟಣೆಯನ್ನು ಕೇಳಿ ದಿಗಿಲುಗೊಂಡರು. ಪ್ರಾಚೀನ ಸುಧಾರಣೇಚ್ಛುಗಳಾದ, ಕಾಂಗ್ರೆಸಿನ ಬೆನ್ನೆಲುಬಿನಂತಿದ್ದ ಕಿಸಾನರಿಗಾಗಿಯೂ ಆ ಅಪಪ್ರಚಾರವು ಉದ್ದೇಶಪೂರ್ವಕವಾಗಿ ನಡೆಯಬೇಕಾಗಿತ್ತು. ಹಾಗೆ ಮತ ವಿರೋಧಕರಾದ ಖಾನರ ನಾಯಕತ್ವವನ್ನು ಕಿಸಾನರು ತೊರೆಯಲೂಬಹುದೆಂದು ನಿರೀಕ್ಷಿಸಲಾಯಿತು. ಆದರೆ ಆ ಎಲ್ಲ ಅಪಪ್ರಚಾರಗಳನ್ನೂ ಮಣ್ಣುಪಾಲು ಮಾಡುವ ಮಾರ್ಗವು ಖಾನರಿಗೆ ಗೊತ್ತಿತ್ತು. ಅವರು ತಕ್ಷಣವೇ ತನ್ನ ಪಡೆಯ ಧ್ಯೇಯಗಳನ್ನು ಜನತೆಯ ಮುಂದಿಟ್ಟರು. ಅವು ಹೀಗಿವೆ:—೧. ದೇವರಿಗೆ ಸಮಾಜಕ್ಕೆ ಮತ್ತು ತಾಯಿ

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಯಾ ಇನ್ನಾವ ಕಾರಣವಿದ್ದರೂ — 'ಕುಮಾರಿ' (Govt. Regd.) ನಿಶ್ಚಿತ ನಿರುಪದ್ರವಿ. ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಘಂಟೆಗಳಲ್ಲಿ ಹರಿಯುವುದು. ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು! ಸಾವಿರಾರು ಮಂದಿ ತೃಪ್ತರಾಗಿದ್ದಾರೆ!! ಬೆಲೆ ರೂ. 3/-. ದೀರ್ಘಕಾಲದ ಮತ್ತು ಕಠಿಣತರ ಸಂದರ್ಭಗಳಿಗೆ ವಿಶೇಷ ತಯಾರಿ. ರೂ. 5/-. ಪ್ರತಿ 6ತಿಂಗಳ ಸಂತತಿ ಪ್ರತಿಬಂಧಕಕ್ಕೆ ರೂ. 4/- (ವಿ. ಪಿ. 12 ಆಣೆ ಹೆಚ್ಚಿಗೆ.) Mrs. P. Devas F. D. S. (K)
Tollygunge, Calcutta.
ಸ್ಟಾಕಿಸ್ಟರು:-ಷಾ ಕಂಪೆನಿ, ಮಂಗಳೂರು.

SOLE AGENTS FOR ARYAN TOOTH BRUSH

ಕಲಾಪಿ ಸ್ನೋಪೌಡರ್,ಸ್ವದೇಶಿ ಮಾರ್ಕೆಟ್ಟು, ಬೊ. ಬಾಯಿ ೭.

Though dead men do not tell tales their widows sometimes do.

The tale "HE DIDN'T INSURE" speaks volumes of the painful life that the bereaved family has to lead.

Wise men never give room for such tales to go round after them.

THE CANARA MUTUAL
Assurance Company, Ltd.,
HEAD OFFICE: **UDIPI** (S. INDIA.)

Chief Agents for the Bombay and Madras Presidencies including States and the States of Mysore and Hyderabad:—
The Commercial Corporation of India, Ltd.,
UDIPI. (S. India)

ಪ್ಯಾಲಸ್ತೈನಿನ ಸಮಸ್ಯೆ-ತ್ರಿಶಂಕು ಸ್ವರ್ಗ

ಬ್ರಿಟಿಶ್ ಅಮೆರಿಕಗಳ ಪ್ಯಾಲಸ್ತೈನ್ ಸಮಿತಿಯ ಶಿಫಾರಸುಗಳು ಸದ್ಯದಲ್ಲೇ ಜಾರಿಗೆ ಬರಲಿವೆಯೆ? ಈ ವಿಷಯದಲ್ಲಿ ಅಮೆರಿಕದವರ ಅಭಿಮತವೇನು? ಮತ್ತೆ ಬ್ರಿಟಿಶ್ ಸರಕಾರದವರ ಹಾವಭಾವವೆಂಥದು? ವಾಷಿಂಗ್‌ಟನ್ನಿನ ಅಥವಾ ಲಂಡನಿನ ಯಾವನೊಬ್ಬ ಜವಾಬುದಾರಿಯುಳ್ಳ ಸರಕಾರೀ ಮುಂದಾಳಾದರೂ ಈ ವಿಷಯದಲ್ಲಿ ಯಾವುದೊಂದು ಅಧಿಕಾರಯುತವಾದ ಹೇಳಿಕೆಯನ್ನಿನ್ನೂ ಕೊಟ್ಟಿಲ್ಲ. ಬ್ರಿಟಿಶ್ ವಿದೇಶಾಂಗದ ಕಾರ್ಯಾಲಯವು ಇನ್ನೂ ಆ ವರದಿಯನ್ನು ಪರಿಶೀಲಿಸುತ್ತಲೇ ಇದೆ ಎನ್ನಲಾಗಿದೆ. ಅಂತೇ ಬ್ರಿಟಿಶ್ ಸರಕಾರ ಅಮೆರಿಕ ಸಂಸ್ಥಾನದ ಶಾಖೆಯೊಡನೆ ಆಲೋಚಿಸುತ್ತಿದೆ ಎಂದೂ ವಾರ್ತೆ. ಅಷ್ಟೇ ಅಲ್ಲ; ಪ್ಯಾಲಸ್ತೈನಿನ ಅರಬರು ಮತ್ತು ಯೆಹೂದಿಗಳೊಡನೆ ಮುಂಚಿತವಾಗಿ ಆಲೋಚಿಸದೆ ಬ್ರಿಟಿಶ್ ಸರಕಾರವು ಆ ಶಿಫಾರಸುಗಳನ್ನು ಅಲ್ಲಿ ಜಾರಿಗೆ ತರುವ ಹವಣಿಕೆಯಲ್ಲಿಲ್ಲವೆಂದೂ ತಿಳಿದು ಬಂದಿದೆ.

ಪ್ಯಾಲಸ್ತೈನಿನ ಮಟ್ಟಿಗೆ ಬ್ರಿಟನ್ ಬಹಳ ಸೂಕ್ಷ್ಮ ಸಂದಿಗ್ಧ ಸ್ಥಿತಿಯಲ್ಲಿರುವಂತೆ ತೋರಿ ಬರುತ್ತಿದೆ. ಪ್ಯಾಲಸ್ತೈನಿನಲ್ಲಿ ಯೆಹೂದಿಗಳು ಹೋಗಿ ನೆಲಸುವಂತೆ ಏರ್ಪಡಿಸುವುದೂ ಅಲ್ಲೊಂದು ಯೆಹೂದಿ ಸಂಸ್ಥಾನವನ್ನು ಸ್ಥಾಪಿಸುವುದೂ—ಇವೇ ಕಳೆದ ಬಾರಿಯ ಚುನಾವಣೆಯಲ್ಲಿನ ಬ್ರಿಟಿಶ್ ಲೇಬರ್ ಪಂಗಡದವರ ಪ್ರಚಾರ ಕಾರ್ಯದ ಮುಖ್ಯಾಂಶಗಳಾಗಿದ್ದುವು. ಈಗ "ಛೆನ್ಸಲರ್ ಆಫ್ ಎಕ್ಸ್‌ಚೆಕರ್" ಆಗಿರುವ ಡಾ. ಹ್ಯೂ ಡಾಲ್ಟನ್ ಅವರು, ಅಂದು ಆ ದಿನಗಳಲ್ಲಿ, ಯೆಹೂದಿಗಳನ್ನು ಪ್ಯಾಲಸ್ತೈನಿನಲ್ಲಿ ನೆಲೆಗೊಳಿಸಲಾಗುವುದೆಂಬ ಕುರಿತು ಕಂಠೋಕ್ತವಾಗಿ ಸಾರಿದುದನ್ನು ಎಂದಿಗೂ ಮರೆಯಲಾಗದು. ಆಗ ಎ. ಜಿನ್ನರೂ ತಮ್ಮ ವಾಡಿಕೆಯ ಸಿಡಿಲು ಗುಡುಗಿನ ಧ್ವನಿಯಲ್ಲಿಯೇ ಉತ್ತರ ಹೇಳಿದ್ದರು. ಈ ಸಂದರ್ಭದಲ್ಲಿ, ಮುಖ್ಯವಾಗಿ ಎ. ಬೆವಿನರ ಆರಂಭದ ಪ್ರಯತ್ನದಿಂದಲೇ ಈ ಬ್ರಿಟಿಶ್ ಅಮೇರಿಕಗಳ ಪ್ಯಾಲಸ್ತೈನ್ ಸಮಿತಿ ಏರ್ಪಟ್ಟಿತೆಂಬುದು ಜ್ಞಾಪಕದಲ್ಲಿ ಇರಬೇಕಾಗಿದೆ. ಈಗ ಈ ಸಮಿತಿಯ ಸದಸ್ಯರಲ್ಲಿ ಒಬ್ಬರಾದ ಎ. ಬಾರ್ಟ್ಲೆ ಕ್ರಮ್ ಅವರು—ಲಂಡನಿನಲ್ಲಿ ಈ ಸಮಿತಿಯ ಗೌರವಾರ್ಥವಾಗಿ ಒಂದು ಔತನ ಸಮಾರಂಭ ಏರ್ಪಟ್ಟು ಅದರಲ್ಲಿ ಬ್ರಿಟಿಶ್ ಮಂತ್ರಿಮಂಡಲದ ಹಲವರೂ ಭಾಗ ವಹಿಸಿದ್ದ ಕಾಲಕ್ಕೆ —"ಸಮಿತಿಯವರೆಲ್ಲರೂ ಏಕಾಭಿಪ್ರಾಯವನ್ನೇ ಕೊಟ್ಟ ಪಕ್ಷಕ್ಕೆ ಕೂಡಲೇ ತಾವು ಅವರ ಶಿಫಾರಸುಗಳನ್ನೆಲ್ಲ ಜಾರಿಗೆ ತರುವುದಾಗಿ" ಬ್ರಿಟಿಶ್ ವಿದೇಶಾಂಗ ಸಚಿವರು ಭರವಸೆಯನ್ನಿತ್ತಿರುವರೆಂಬ ಈ ಸ್ವಾರಸ್ಯವಾದ ಗುಟ್ಟನ್ನು ಬಹಿರಂಗಪಡಿಸಿರುತ್ತಾರೆ. ಆದರೆ ಬ್ರಿಟಿಶ್ ವಿದೇಶಾಂಗ ಕಾರ್ಯಾಲಯದ ಮುಖ್ಯಾಧಿಕಾರಿಗಳೇನೋ ಈ ವಾರ್ತೆಯನ್ನು—ಪ್ರಾಯಶಃ ಎಂ. ಬೆವಿನರ ಸಮ್ಮತಿ ಪಡೆದೇ —ಅಲ್ಲಗಳೆದಿದ್ದರೂ ಎಂ. ಕ್ರಮ್ ಸಾಹೇಬರು ಮಾತ್ರ ತಾವು ಮೊದಲೇನು ಹೇಳಿಕೆ ಕೊಟ್ಟಿದ್ದರೋ ಅದೇ ಈಗಲೂ ಪೂರ್ಣ ಸತ್ಯವೆನ್ನುತ್ತಾರೆ. ಅಷ್ಟೇ ಅಲ್ಲ; ಅವರು ಇನ್ನೂ ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಅವರು ಸಾನ್ ಫ್ರಾನ್ಸಿಸ್ಕೋ ನಲ್ಲಿ ಮಾತಾಡುತ್ತ — "ಯೆಹೂದಿಗಳು ಒಳನುಗ್ಗುವುದನ್ನು ತಡೆಗಟ್ಟಲು ಅರಬೀ ಮುಂದಾಳುಗಳು ಸೊಎಯಟೆನವರ ಸಹಾಯವನ್ನು ಕೇಳುವುದಾಗಿ ಹೇಳುತ್ತಾರೆ. ಇದೆಲ್ಲ ಪುಕ್ಕತನದ ಬ್ರಿಟಿಶ್ ವಿದೇಶಾಂಗ ಕಾರ್ಯಾಲಯವನ್ನು ಬೆದರಿಸುವ ಉದ್ದೇಶವುಳ್ಳ ಪ್ರಚಂಡಾಕಾರದ ಸುಳ್ಳು ನೆವ" ಎಂದರು. ಬ್ರಿಟಿಶ್ ಸರಕಾರದವರು ಈ ಶಿಫಾರಸುಗಳನ್ನು ಜಾರಿಗೆ ತರುವಲ್ಲಿ ಆದಷ್ಟು ಎಳಂಬಿಸುವಂತೆ ಯೆತ್ನಿಸುತ್ತಿರುವುದಾಗಿ ಅವರನ್ನು ಇವರು ದೂರಿದ್ದಲ್ಲದೆ, "ಅಮೆರಿಕದ ಯೆಹೂದಿಗಳಲ್ಲಿನ ಅನೈಕ್ಯವು ಗ್ರೇಟ್ ಬ್ರಿಟನಿಗೆ ಸಹಾಯಮಾಡಿ ಅದನ್ನು ಸಂತೋಷಪಡಿಸುವುದು; ಅದೇ ಆ ಯೆಹೂದಿಗಳು ಒಗ್ಗಟ್ಟಾದರೆ ಈ ಶಿಫಾರಸುಗಳನ್ನು ಕೂಡಲೇ ಜಾರಿಗೆ ತರುವಂತೆ ಬ್ರಿಟನ್ ಬಲಾತ್ಕರಿಸಲ್ಪಡುವುದು" ಎಂದೂ ಎಚ್ಚರಿಸಿರುವರು.

ಅಮೆರಿಕವು ಹಲವಾರು ಕಾರಣಗಳಿಂದ ಯೆಹೂದಿಗಳ ಪಕ್ಷಪಾತಿಯಾಗಿದೆ. ಪ್ಯಾಲಸ್ತೈನಿನೊಳಗೆ ಯೆಹೂದಿಗಳು ಹೋಗಿ ನೆಲಸುವಂತಾಗಬೇಕೆಂದು ಪ್ರಬಲವಾಗಿ ವಾದಿಸಿದವರಲ್ಲಿ ದಿವಂಗತ ಪ್ರೆಸಿಡೆಂಟ್ ರುಜ್ವೆಲ್ಟರೂ ಒಬ್ಬರಾಗಿದ್ದರು. ಅರಬೀ ಮುಂದಾಳುಗಳು ಎರಡು ವರ್ಷಗಳ ವರೆಗೆ ಎಷ್ಟೇ ಪ್ರಾರ್ಥಿಸಿಡರೂ ರುಜ್ವೆಲ್ಟರ ಈ ಕಾರ್ಯನೀತಿಯಲ್ಲಿ ಒಂದಿಷ್ಟೂ ಬದಲಾವಣೆಯಾಗಲಿಲ್ಲ. ಈಗ ಪ್ರೆಸಿಡೆಂಟ್ ಟ್ರುಮನರು ಅನುಸರಿಸುತ್ತಿರುವುದೂ ತಮ್ಮ ಹಿಂದಿನವರ ಧೋರಣೆಯನ್ನೇ. ಅಮೆರಿಕದ ಸೆನೆಟೂ ಪ್ರಜಾಪ್ರತಿನಿಧಿ ಸಭೆಯೂ ಪ್ಯಾಲಸ್ತೈನಿನೊಳಗೆ ಯೆಹೂದಿಗಳನ್ನು ಪ್ರವೇಶಗೊಳಿಸಲೇ ಬೇಕೆಂಬ ಕಾರ್ಯನೀತಿಯ ಪರವಾಗಿಯೇ ಬಹಿರಂಗವಾಗಿ ಉದ್ಘೋಷಿಸಿವೆ. ಬ್ರಿಟಿಶ್ ಅಮೆರಿಕಗಳ ಪ್ಯಾಲಸ್ತೈನ್ ಸಮಿತಿಯ ವರದಿ ಕಳೆದ ಮೇ ತಾ. ೧೭ರಲ್ಲಿ ಪ್ರಕಟಗೊಂಡಾಗ, ಪ್ರೆಸಿಡೆಂಟ್ ಟ್ರುಮನರಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಆಗ ಅವರು ೧೦೦೦೦೦ ಮಂದಿ ಯೆಹೂದಿಗಳು ಪ್ಯಾಲಸ್ತೈನಿಗೆ ಹೋಗಿ ನೆಲಸುವಂತೆ ಕೂಡಲೇ ತಕ್ಕ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂಬ ಅಭಿಪ್ರಾಯ ಸೂಚಿಸಿದ್ದರು.

ಪ್ಯಾಲಸ್ತೈನ್ ಕಮಿಟಿಯ ಶಿಫಾರಸುಗಳು ಕೂಡಲೇ ಜಾರಿಗೆ ಬರಬೇಕೆಂದು ಅಮೆರಿಕದವರು ಬಹಳ ಆತುರಗೊಂಡಿದ್ದಾರೇನೋ ನಿಜ. ಆದರೆ ಬ್ರಿಟಿಶ್ ವಿದೇಶಾಂಗ ಸಚಿವರಾಗಲೀ ಬ್ರಿಟಿಶ್ ಲೇಬರ್ ಸರಕಾರವಾಗಲೀ ಈ ಮೊದಲು ಈ ವಿಷಯದಲ್ಲಿ ಏನೇ ಕಂಠೋಕ್ತವಾಗಿ ಹೇಳಿದ್ದರೂ ಬ್ರಿಟಿಶ್ ಸರಕಾರಕ್ಕೆ ಈಗ ಅಂಥ ಅವಸರವಾಗಲೀ ಆತುರವಾಗಲೀ ಇಲ್ಲ. ಎಲ್ಲಿಯಾದರೂ ಈ ಕಮಿಟಿಯ ಶಿಫಾರಸುಗಳನ್ನು ಜಾರಿಗೆ ತರಲು ಯತ್ನಿಸಿದ್ದೇ ಆದರೆ ಆಗ ಇಡಿಯ ಮಧ್ಯ ಪೂರ್ವ ಪ್ರಾಂತದಲ್ಲೇ ಅರಬಿಯರ ದೊಡ್ಡ ಗಲಭೆ ಉಂಟಾದೀತೆಂದು ಬ್ರಿಟಿಶ್ ಸರಕಾರದ ಭೀತಿ. ಅದು ನ್ಯಾಯವಾದುದೂ ಆಹುದು- ಏತಕ್ಕೆಂದರೆ ಅಂಥ ಗಲಭೆಯ ಪೂರ್ವ ಪೀಠಿಕೆಯ ನಿದರ್ಶನಗಳು ಈಗಾಗಲೇ ನಮ್ಮ ಕಣ್ಣ ಮುಂದೆ ಸುಳಿದಾಡುತ್ತಿವೆ. ಯಾವತ್ತು ಅರಬೀ ಸಂಸ್ಥಾನಗಳೂ ಒಂದುಗೂಡಿ ಒಂದೇ ಧ್ವನಿಯಲ್ಲಿ ಈ ವರದಿಯನ್ನು ಖಂಡಿಸಿರುವುದೇ ಅಲ್ಲದೆ ಇದಕ್ಕೆ "ದ್ರೋಹಾಚರಣೆ" ಎಂಬ ಹೆಸರನ್ನೂ ಬೇರೆ ಕೊಟ್ಟಿದೆ. ಹಾಗೆ ಪಾದರಕ್ಷೆ ಧರಿಸಿದ ಬ್ರಿಟನಿಗೆ ಅದೆಲ್ಲಿ ಕಜ್ಜಿತ್ತಿದೆ ಎಂದು ತಿಳಿದಿದೆ. ಅಮೆರಿಕದ ವಿಚಾರ ಮಾತ್ರ ಹಾಗಲ್ಲ. ಬ್ರಿಟಿಶ್ ಸರಕಾರವು ಈಜಿಪ್ಟಿನಿಂದ ತನ್ನ ಸೇನೆಯನ್ನು ಹಿಂದೆ ಕರೆಸಿಕೊಂಡದ್ದು ಆ ದೇಶವನ್ನು ಒಲಿಸಿಕೊಳ್ಳುವುದಕ್ಕಾಗಿಯೇ ಅಲ್ಲ—ಇಡಿಯ ಅರಬ ಜಗತ್ತನ್ನೂ ಸಂತೋಷಪಡಿಸಲಿಕ್ಕಾಗಿಯೇ. ಆದರೆ ಬ್ರಿಟಿಶರ ಈ "ಉದಾರ" ಕಾರ್ಯವೂ ಪ್ಯಾಲಸ್ತೈನಿನ ಅರಬರಿಗೆ ಕೊಂಚವೂ ಸಮಾಧಾನವನ್ನು ಉಂಟು ಮಾಡಿಲ್ಲ. ಅರಬರ ಮುಂದಾಳಾದ ಜಮಾಲ್ ಹುಸೇನರು "ಬ್ರಿಟಿಶ್ ಅಮೆರಿಕಗಳವರ ಕಾರ್ಯಕ್ರಮಗಳಲ್ಲಿ ನಮ್ಮ ಆಶೆ ಕಡಿದಿದೆ ಎಂದು ನಾನು ಅರಬಿ ಲೀಗಿಗೆ ತಿಳಿಸುತ್ತೇನೆ ನಮಗೆ ಜನಾಂಗ ಸಂಘದಲ್ಲಿನ ವಿಶ್ವಾಸವು ಅಳಿದು ಹೋಯಿತು. ಮತ್ತೆ ಯು. ಎನ್. ಒ ಎಂದರೆ ಇನ್ನೊಂದು ಜನಾಂಗ ಸಂಘವೇ ಸರಿ. ಅರಬೀ ಜಗತ್ತು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯಾವತ್ತು ವಿಶ್ವಾಸವನ್ನೂ ಕಳೆದುಕೊಂಡದ್ದಾದರೆ, ಆಗ ಅರಬರು ನೇರವಾಗಿ ಮೋಸ್ಕೊವ್ಗೇ ತೆರಳುವರು" ಎನ್ನುತ್ತಾರೆ. ಬಾರ್ಟ್ಲೆ ಕ್ರಮ್ ಸಾಹೇಬರು ಇದನ್ನು "ಪ್ರಚಂಡಾಕಾರದ ಠಕ್ಕು" ಎನ್ನಬಹುದಾದರೂ, ಬ್ರಿಟಿಶ್ ಸರಕಾರವು ಹಾಗೆನ್ನದು. ಪ್ಯಾಲಸ್ತೈನ್ ವರದಿಯ ಶಿಫಾರಸುಗಳನ್ನು ಜಾರಿಗೆ ತರುವುದರಿಂದ ಎಂಥ ಗಭೀರ ಪರಿಣಾಮವುಂಟಾದೀತೆಂಬುದು ಬ್ರಿಟನಿಗೆ ಚೆನ್ನಾಗಿ ತಿಳಿದಿದೆ. ಆದ್ದರಿಂದ ಪ್ರಶ್ನೆ ಇಷ್ಟೇ:—ಬೆಕ್ಕಿಗೆ ಗಂಟೆ ಕಟ್ಟುವವರು ಯಾರು? ತನ್ನೊಡನೆ ಈ ವ್ಯವಹಾರದಲ್ಲಿ ಅಮೆರಿಕವು ಭಾಗಿಯಾಗಬೇಕು, ಯಾವತ್ತು ಮಿಲಿಟರಿ ಮತ್ತು ಆರ್ಥಿಕ ಹೊಣೆಗಾರಿಕೆಯಲ್ಲಿ ಅದು ಪಾಲುಗಾರನಾಗಬೇಕು ಎಂದು ಬ್ರಿಟನ್ ಹೇಳುತ್ತಿದೆ ಆದರೆ ವಾಷಿಂಗ್‌ಟನ್ ಇನ್ನೂ ಮಾತಾಡುವುದಿಲ್ಲ. ಆದ್ದರಿಂದಲೇ ಬ್ರಿಟಿಶ್ ವಿದೇಶಾಂಗ ಕಾರ್ಯಾಲಯ ಒಂದು ಹೆಜ್ಜೆ ಮುಂದಿಟ್ಟರೆ, ಎರಡು ಹೆಜ್ಜೆ ಹಿಂದಿಡುತ್ತಿದೆ. ಇಷ್ಟರಲ್ಲಿ ಮಧ್ಯ ಪೂರ್ವದ ಸ್ಥಿತಿ ಹಿಂದಿನಷ್ಟೇ ಅಪಾಯಕರವಾಗಿದೆ.—ಅದೆಂದು ಒಡೆದು ಸಿಡಿಯುವುದೋ ಕಾಲನಿಗೇ ಗೊತ್ತು.

ನಿರ್ಬಂಧಾಜ್ಞೆ ಹಿಂತೆಗೆಯಲಾಯಿತು

ಪಂಡಿತ ಜ. ನೆಹರುಯವರು ಫರೀದ್‌ಕೋಟ್ ಸಂಸ್ಥಾನದ ಅರಸರೊಡನೆ ಮಾತಾಡಿದ ಪರಿಣಾಮವಾಗಿ ಅಲ್ಲಿನ ಯಾವತ್ತು ನಿರ್ಬಂಧಾಜ್ಞೆಗಳನ್ನೂ ಹಿಂದೆಗೆಯುವ ಥರವಸೆ ದೊರಕಿದೆ.

ಮದ್ರಾಸ್ ಸಂಸ್ಥಾನದಲ್ಲಿ ನೂಲು ಬಟ್ಟೆ

ನಮ್ಮ ಪ್ರಧಾನರು ನಮ್ಮ ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಈ ಆಧಿಪತ್ಯದಲ್ಲಿ ನೂಲು ಬಟ್ಟೆಗಳ ಸರಬರಾಯಿ ಕಡಿಮೆಯಾಗಿದೆ ಎಂದೂ, ದೊರಕಿದಷ್ಟು ಎಲ್ ಬಟ್ಟೆಗಳನ್ನು ಎಲ್ಲ ಕಡೆಗಳಲ್ಲಿ ಎಲ್ಲರಿಗೂ ಸಮಾನವಾಗಿ ಹಂಚುವ ಆಲೋಚನೆ ನಡೆದಿದೆ ಎಂದೂ ತಿಳಿಸಿದರು.

Mangalore Automobiles Limited,
MANGALORE.

The share transfer Books of the Company will be closed from 10th June to 23rd June 1946 both days inclusive.

(By order of the Board)

G. Somashekar Rao,
CHAIRMAN.

ಮಕ್ಕಳಿಗೆ
ಡೋಂಗರೆ ಬಾಲಾಮೃತವು
ಆದರ್ಶಕವಾದ ಪೌಷ್ಟಿಕ. ಇದು ಮಧುರವಾಗಿದೆ.

ದಿ ಬೊಂಬೆಲ್ಯಾಫ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್.

1908ರಲ್ಲಿ ಸ್ಥಾಪಿಸಲ್ಪಟ್ಟದ್ದು

ಶಾಂತಿ ಮತ್ತು ಭದ್ರತೆ

ಯುರೋಪಿನ ಪೀಡಿಸಲ್ಪಟ್ಟ ಜನಾಂಗಗಳಿಗಾಗಿ ಸ್ವಾತಂತ್ರ್ಯವನ್ನು ಗಳಿಸಿ ಕೊಂಡಿದ್ದ ಆ ಪ್ರಚಂಡ ಯುದ್ಧ ಮುಗಿಯಿತು. ಆ ನಾಲ್ಕು ಸ್ವಾತಂತ್ರ್ಯ ಗಳನ್ನು ಸಂಪಾದಿಸಿ ಕೊಡಲು ಹಲವಾರು ಯತ್ನಗಳಾದರೂ ನಾವು ಅದರ ಸವಿಾಪದಲ್ಲೆಲ್ಲಿಯೂ ಇದ್ದಂತೆ ತೋರುವುದಿಲ್ಲ. ನಾವು ಎಮೆಯ ಸೇವೆ ಯನ್ನು ಬಯಸುವವರೆಲ್ಲರಲ್ಲಿಯೂ ಆ ಸೇವಾ ಕ್ರಮವನ್ನು ಹರಡಿಸುವ ಮೂಲಕ, ಯುದ್ಧ ಕಾಲದಲ್ಲಿಯೂ ಶಾಂತಿ ಸಮಯದಲ್ಲಿಯೂ ಈ ವೈಯಕ್ತಿಕ ವಾಸ್ತವಿಕ ಸ್ವಾತಂತ್ರ್ಯ ಸಿದ್ಧಿ ಕಾರ್ಯದಲ್ಲಿ ನಮ್ಮ ನಮ್ಮ ರೀತಿ ಯಲ್ಲಿ ಸಹಾಯ ಮಾಡುತ್ತಿದ್ದೇವೆ.

1945ರಲ್ಲಿ ಪೂರ್ಣವಾದ ವ್ಯವಹಾರ } ಕಂಪೆನಿಯದು: **2**ಕ್ಕಿ ಕೋಟಿಗೂ ಎಕ್ಕಿ ನಮ್ಮದು: ಸುಮಾರು **50**ಲಕ್ಷ

ಕೊಚ್ಚಿಕಾರ ಸಹೋದರರು ಲಿಮಿಟೆಡ್,

(1910ರಲ್ಲಿ ಸ್ಥಾಪಿಸಲ್ಪಟ್ಟದ್ದು)

ದಕ್ಷಿಣ ಹಿಂದೂಸ್ಥಾನದ ಪ್ರಮುಖ ಏಜೆಂಟರು ಬೊಂಬಯಿ ನಗರ ಮತ್ತು ಗಿದರ ಸುತ್ತಮುತ್ತಲಿನ ಪ್ರದೇಶಗಳಿಗೆ ಸ್ಪೆಶಲ್ ಏಜೆಂಟರು.

"ಬೊಂಬಯಿ ಲ್ಯಾಫ್ ಬಿಲ್ಡಿಂಗ್ಸ್"

ಗಾಂಧಿ ನಗರ, ಉಡುಪಿ.

ಆಫೀಸುಗಳು ಇರುವ ನಗರಗಳು:—

ಬೊಂಬಯಿ, ಬೆಂಗಳೂರು, ಕಲ್ಲಿಕೋಟೆ, ಮಧುರೆ, ಮಂಗಳೂರು, ಮದ್ರಾಸು ಮತ್ತು ತ್ರಿವೆಂದ್ರಮ್.

ದಕ್ಷಿಣ ಭಾರತದಲ್ಲೆಲ್ಲ ಏಜೆನ್ಸಿಗಳಿವೆ.

THE UNITED KARNATAK INSURANCE CO., LTD.

H. O.: Dharwar. Estd: 1929.

Glad to announce the business increase in 1945 is

400% of that of in 1944.

We entertain young, energetic and ambitious persons, as agents, special agents, Organisers and Inspectors under our expansion scheme.

A. S. Kini,
Managing Director.

Please apply to:
BRANCH MANAGER,
Court Road, UDIPI.

Or M/s. M. N. BHANDARY & Co.,
Kodialbail, MANGALORE.

ಛಾತ್ರಿ ಬಣ್ಣದ. ಆಧುನಿಕ ನಮೂನೆಯ
ಶ್ರೇಷ್ಠ ತರಗತಿಯ
80 ಮತ್ತು 100 "ಕೌಂಟ್" ಸೀರೆಗಳು
ಮತ್ತು
ಕೈ ಮಗ್ಗದ ಮೈಟಿ ವ್ಯಾಲುಗಳು

ಪಡೆಯುವ ಮುಂಚೆ JNC ಗುರುತನ್ನು ನೋಡಲು ಮರೆಯದಿರಿ.

ಜೆ. ನಾರಾಯಣ ಸಾಮಿ ಚೆಟ್ಟಿ ಎಂಡ್ ಕೊ.,
ರಖಂ ವ್ಯಾಪಾರಿ 18/498 ರಂಗೈ ಗೆ ರ ರಸ್ತೆ
ಕೆ ಯುಂಮುತ್ತೂರು.

☞ **Machine to increase your Resources** ☜
Rs. 89 8 0 will fetch Rs. 100

Jaya Cash Certificates

For particulars apply to:—

The Bank of Mangalore Ltd.

HEAD OFFICE: CAR STREET, MANGALORE

BRANCHES:— ○ Bunder ○ Moodabidri ○ Vittal ○ Mangalore ○ Padubidri ○ Badiadka and ○ Uppinangadi

ಶಾಸ್ತ್ರೀಯ ಅಮೂಲ್ಯ ಔಷಧಗಳ

ಅಮೃತಾಕುಂಕುಮ ತೈಲ:—ಇದು ಪುನರ್ವಸು ಆತ್ರೇಯ ಎಂಬ ಮಹರ್ಷಿಯಿಂದ ಕಂಡು ಹಿಡಿಯಲ್ಪಟ್ಟದ್ದು. ಅಭ್ಯಂಗಕ್ಕೆ ಅಮೋಘವಾದ ಈ ತೈಲವು ಚಿಕ್ಕ ಮಕ್ಕಳಿಂದ ವೃದ್ಧರ ವರೆಗಿನ ಪ್ರಜಾವರ್ಗಕ್ಕೆ ಬಹಳ ಅನುಕೂಲ ಮತ್ತು ಆರೋಗ್ಯವನ್ನು ಕೊಡುವುದು. ಮೆದುಳು ಮತ್ತು ಸ್ನಾಯುಗಳಿಗೆ ಅಧಿಕ ಸಾಮರ್ಥ್ಯವನ್ನೀಯುವುದು. 8 ಔನ್ಸಿನ ಬಾಟ್ಲಿಗೆ ರೂಪ್ಯಾ 2—4—0. ಅಂಚೆವೆಚ್ಚ ಬೇರೆ.

ಚ್ಯವನಪ್ರಾಶ:—ಚ್ಯವನನೆಂಬ ವೃದ್ಧ ಮಹರ್ಷಿಗೆ ಅಶ್ವನೀ ದೇವತೆಗಳಿಂದ ಪ್ರಯೋಗಿಸಲ್ಪಟ್ಟ ಮಹಾ ರಸಾಯನವಾಗಿದೆ. ಶ್ವಾಸಕೋಶ, ಕ್ಷಯ, ಹೃದ್ರೋಗಗಳೆಂಬ ಮಕ್ಕಳ ವ್ಯಾಧಿಗಳಿಗೂ ಶರೀರವೃದ್ಧಿಗೂ ಹಿತಕರವಾದ ಫಲಮೂಲಿಕೆಗಳಿಂದ ತಯಾರಿಸಲ್ಪಟ್ಟ ಔಷಧಿ ಯಾಗಿದೆ. ಪೌಂಡಿಗೆ ರೂ. 4—0—0. ಅಂಚೆವೆಚ್ಚ ಬೇರೆ.

ಕಸ್ತೂರಿ ಮಿಶ್ರಣ! ದಶಮೂಲ ಸುಖಪ್ರದ ಔಷಧಿ.

ಬಾಣಂತಿಯರ ನವಜೀವನಕ್ಕೆ ನಂದನವನದಂತಿರುವುದು.

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯ ಗಳಾಗಿವೆ. ಶೋಧನ ಗುಣದಿಂದ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸವದಿಂದ ಪ್ರಸೃತವಾಧ ಗರ್ಭಕೋಶವನ್ನು ಒಂದೆರಡು ದಿವಸಗಳಲ್ಲೇ ಅಂಕುಚಿತಮಾಡುವುದು.

ರಸಾಯನ ಗುಣದಿಂದ ಬಾಣಂತಿಯು – ಗರ್ಭದ ಬೆಳವಣಿಗೆ ಬಗ್ಗೆ ಮತ್ತು ಪ್ರಸವದ ಬಗ್ಗೆ ಕಳಕೊಂಡ ಶಕ್ತಿಯನ್ನು ಕೂಡಲೇ ಪುನರುಜ್ಜೀವಿಸುವುದು.

ಸುಖಸೇವನ ಗುಣದಿಂದ ಬಾಣಂತಿಯಲ್ಲಿ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವದ ನಂತರ ಉಂಟಾಗುವ ಗರ್ಭಕೋಶದ ವ್ಯಥಾ (ಬೇನೆ)ಯನ್ನು ಶೀಘ್ರದಿಂದ ಹೋಗಲಾಡಿಸುವುದು. ತಿಂಗಳು 1ಕ್ಕೆ 1 ಬಾಟ್ಲಿ ಬೇಕಾಗುವುದು.

ಕ್ರಯ ಬಾಟ್ಲಿ 1ಕ್ಕೆ ರೂ. 2—0—0 ಪೋಸ್ಟೇಜು ವಗೈರೆ ಬೇರೆ.

ವಿ. ಸೂ. ಮೇಲಿನ ಕ್ರಯವು ಬಜಾರ ಧಾರಣೆಗೆ ಅನುಸರಿಸಿ ಇರುತ್ತದೆ.

ಶ್ರೀ। ಪಿ. ಮಹಾಬಲ ಹೆಬ್ಬಾರ್,
ತೀರ್ಥಹಳ್ಳಿ, ಇವರನ್ನು ಮೈಸೂರು ಸಂಸ್ಥಾನದ ನಮ್ಮ ಏಜೆಂಟರನ್ನಾಗಿ ನೇಮಕಮಾಡಿಯದೆ.

ಯಮ್. ವಿ. ಶಾಸ್ತ್ರೀ,
ಆಯುರ್ವೇದ ಭೂಷಣ,
ಮಂಗಳೂರು, ದ. ಕನ್ನಡ.

THE
Pie-Money Bank, Ltd.,
Maidan Road, MANGALORE.

Undertakes all kinds of Banking Business. Current account at 1% per annum. Savings Bank Deposits at 4% per annum.

FIXED DEPOSITS.
For 2 years 4½% 1 year 4%
For 6 months 3½% 3 months 3%

Auction Chit Funds ranging from Rs. 100—5000 run regularly on systematic lines.

Unique Banking facilities to Businessmen and interested Public.

Apply for particulars:—
K. R. Guru,
Managing Director.

ವೆಂಕಟಗಿರಿಮಹಾತ್ಮೆ

ವೆಂಕಟೇಶನು ಗಿರಿಯಲ್ಲಿ ನಡೆಸಿದ ಅದ್ಭುತ ಕಾರ್ಯಗಳು ವಾಚಕರಿಗೆ ಮನಃಖುಚಿತ ವಾಗುವಂತೆ ಗೇಜ್ ಕಾಗದದಲ್ಲಿ ೧೪ ಹಾಫ್‌ಟೋನ್ ಬ್ಲಾಕುಗಳಿಂದ ಕೂಡಿದೆ. ೫೯೯ ಪದ್ಯಗಳಿರುವ ೧೫ ಅಧ್ಯಾಯಗಳು ಧಪ್ಪವಾದ ಕಾಗದ. ಶುದ್ಧಾದ ಮುದ್ರಣ.

ಬೆಲೆ ರೂಪ್ಯಾ ೧—೮—೦ ಟಪ್ಪಾಲು ಹಾಸಿಲು ಬೇರೆ.
ಸಂಸ್ಕೃತ

ಕವಿ ಎಂಡ್ ಸನ್ಸ್, ಮಂಗಳೂರು, ದ. ಕ.

JAYA LAXMI BANK, LTD.,

MANGALORE.

have great pleasure in announcing that a branch of the bank will be opened at Kumbla on the 6th of June 1946 in the building occupied at present by the Canara Bank, Ltd.,

M. Narain Shanker,
MANAGER.

Printed & Published by M. Baburaya Prabhu, B. A. at the Mangalore Press, Car-Street, Mangalore. Editor: Hurli Bhima Rao